**ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560001.**

**ಸಂಖ್ಯೆ:ಇಪ(1)671/2018–19/ಪಿಎಸ್‌ಸಿ** **ದಿನಾಂಕ:07–11–2018**

**ಅಧಿಸೂಚನೆ**

1. ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಪರೀಕ್ಷೆ ನಡೆಸುವಿಕೆ) ನಿಯಮಗಳು, 1965 ಮತ್ತು ಕರ್ನಾಟಕ ನಾಗರಿಕ ಸೇವೆಗಳು (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರ ಮೇರೆಗೆ ಆಯೋಗವು **2018ನೇ ಸಾಲಿನ ದ್ವಿತೀಯ** ಅಧಿವೇಶನದ ಇಲಾಖಾ ಪರೀಕ್ಷೆಗಳನ್ನು ನಡೆಸಲು ಕರ್ನಾಟಕ ನಾಗರಿಕ ಸೇವಾ ನಿಯಮಗಳಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. **ಸದರಿ ಅಧಿಸೂಚನೆಯನ್ನು ಆಯೋಗದ ವೆಬ್‌ಸೈಟ್ "http://kpsc.kar.nic.in"ನಲ್ಲಿ ಬಿತ್ತರಿಸಲಾಗಿದೆ.** ಈ ಪರೀಕ್ಷೆಗಳನ್ನು ಅಧಿಸೂಚನೆಯಲ್ಲಿ ಸೂಚಿಸಿರುವ ವೇಳಾ ಪಟ್ಟಿಗಳನ್ವಯ ನಡೆಸಲಾಗುವುದು.

2. ಅರ್ಜಿ ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ನಿಗದಿಪಡಿಸಿದ ದಿನಾಂಕಗಳು ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು ಈ ಕೆಳಗಿನಂತಿವೆ. ಕೊನೆಯ ದಿನಾಂಕದ ನಂತರ ಸಲ್ಲಿಸುವ ಅರ್ಜಿ/ ದಾಖಲೆಗಳನ್ನು ಅಭ್ಯರ್ಥಿಗಳಿಗೆ ಯಾವುದೇ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು.

| ಕ್ರ.ಸಂ. | ವಿಷಯ | ನಿಗದಿಪಡಿಸಿದ ಕೊನೆಯ ದಿನಾಂಕಗಳು |
|---|---|---|
| 1 | ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ಪ್ರಾರಂಭಿಕ ದಿನಾಂಕ | 09/11/2018 |
| 2 | ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ | 08/12/2018 (ರಾತ್ರಿ 11.45 ಗಂಟೆಯೊಳಗೆ) |
| 3 | ಅಂಚೆ ಕಛೇರಿಯಲ್ಲಿ ಶುಲ್ಕ ಸಂದಾಯ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ (e-payment Post Offices Only) | 10/12/2018 (ಅಂಚೆ ಕಛೇರಿಯ ವ್ಯವಹಾರದ ವೇಳೆಯೊಳಗೆ) |
| 4 | ಎಸ್.ಎ.ಎಸ್. ವಿಷಯದ ಪರೀಕ್ಷಾ ಅಭ್ಯರ್ಥಿಗಳು ನಿಗದಿತ ಅನುಬಂಧ–ಡಿ ಮತ್ತು ಅಕೌಂಟ್ಸ್ ಹೈಯರ್ ಪ್ರಮಾಣಪತ್ರದ ದೃಢೀಕೃತ ಪ್ರತಿಯನ್ನು ಮತ್ತು ಆನ್‌ಲೈನ್ ಅರ್ಜಿಯ ಪ್ರತಿಯನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ | 20/12/2018 (ಸಂಜೆ 5:00 ಗಂಟೆಯೊಳಗೆ ಆಯೋಗದ ಕಛೇರಿಯಲ್ಲಿ ಸ್ವೀಕೃತವಾಗುವಂತೆ ಸಲ್ಲಿಸತಕ್ಕದ್ದು) |
| 5 | ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಕೆಲವು ಪತ್ರಿಕೆಗಳಿಗೆ ವಿನಾಯಿತಿ ಕೋರುವ ಅಭ್ಯರ್ಥಿಗಳು ಮನವಿಯೊಂದಿಗೆ ತಮ್ಮ ಪದವಿಯ ಎಲ್ಲಾ ಸೆಮಿಸ್ಟರುಗಳ/ವರ್ಷಗಳ ಅಂಕಪಟ್ಟಿಗಳು ಮತ್ತು ಘಟಿಕೋತ್ಸವ ಪ್ರಮಾಣ ಪತ್ರದ ಪ್ರತಿಗಳನ್ನು ಹಾಗೂ ಆನ್‌ಲೈನ್ ಅರ್ಜಿಯ ಪ್ರತಿಯನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ | 20/12/2018 (ಸಂಜೆ 5:00 ಗಂಟೆಯೊಳಗೆ ಆಯೋಗದ ಕಛೇರಿಯಲ್ಲಿ ಸ್ವೀಕೃತವಾಗುವಂತೆ ಸಲ್ಲಿಸತಕ್ಕದ್ದು) |
| 6 | ಅನುಲೇಖನ ಸಹಾಯ ಕೋರಿ ಮನವಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ | 20/12/2018 (ಸಂಜೆ 5:00 ಗಂಟೆಯೊಳಗೆ ಆಯೋಗದ ಕಛೇರಿಯಲ್ಲಿ ಸ್ವೀಕೃತವಾಗುವಂತೆ ಸಲ್ಲಿಸತಕ್ಕದ್ದು) |
| 7 | ಪರೀಕ್ಷಾ ಕೇಂದ್ರ ಬದಲಾವಣೆಗೆ ಮನವಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ | 31/12/2018 (ಸಂಜೆ 5:00 ಗಂಟೆಯೊಳಗೆ ಆಯೋಗದ ಕಛೇರಿಯಲ್ಲಿ ಸ್ವೀಕೃತವಾಗುವಂತೆ ಸಲ್ಲಿಸತಕ್ಕದ್ದು) |

--2

3. <u>ಇಲಾಖಾ ಪರೀಕ್ಷೆಗಳನ್ನು ಮೂರು ಹಂತಗಳಲ್ಲಿ ನಡೆಸಲಾಗುವುದು. ಆ ವಿವರಗಳು ಈ ಕೆಳಕಂಡಂತಿದೆ</u>:–

ಅ) ಪ್ರಥಮ ಹಂತವಾಗಿ ಕೆಲವು ವಿಷಯಗಳ ಪರೀಕ್ಷೆಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ನವದೆಹಲಿ ಹಾಗೂ ಮಸ್ಸೂರಿ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುವುದು.

ಆ) ದ್ವಿತೀಯ ಹಂತವಾಗಿ ಕೆಲವು ವಿಷಯಗಳ ಪರೀಕ್ಷೆಗಳನ್ನು ಬೆಂಗಳೂರು, ಮೈಸೂರು, ಶಿವಮೊಗ್ಗ, ಬೆಳಗಾವಿ, ಕಲಬುರಗಿ, ಮತ್ತು ನವದೆಹಲಿ ಹಾಗೂ ಮಸ್ಸೂರಿ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುವುದು.

ಇ) ತೃತೀಯ ಹಾಗೂ ಅಂತಿಮ ಹಂತವಾಗಿ ಕೆಲವು ವಿಷಯಗಳ ಪರೀಕ್ಷೆಗಳನ್ನು ಬೆಂಗಳೂರು ಕೇಂದ್ರದಲ್ಲಿ ಮತ್ತು ಅಪೇಕ್ಷಿತಾ ಅರ್ಹ ಅಭ್ಯರ್ಥಿಗಳಿದ್ದಲ್ಲಿ ನವದೆಹಲಿ ಹಾಗೂ ಮಸ್ಸೂರಿಯಲ್ಲಿ ಸಹ ನಡೆಸಲಾಗುವುದು.

4. ಪರೀಕ್ಷಾ ಕೇಂದ್ರಗಳ ಬಗೆಗಿನ ವಿವರಗಳನ್ನು ಇದೇ ಅಧಿಸೂಚನೆಯಲ್ಲಿ ಸ್ಪಷ್ಟವಾಗಿ ಸಂಪೂರ್ಣವಾಗಿ ತಿಳಿಸಲಾಗಿದೆ ಹಾಗೂ ವಿವಿಧ ಕೇಂದ್ರಗಳಲ್ಲಿ ನಡೆಸಲಾಗುವ ಪರೀಕ್ಷಾ ವೇಳಾ ಪಟ್ಟಿಯನ್ನು ಅನುಬಂಧ–'ಎ', ಅನುಬಂಧ–'ಬಿ' ಮತ್ತು ಅನುಬಂಧ–'ಸಿ'ನಲ್ಲಿ ನೀಡಲಾಗಿದೆ.

5. ಮೇಲೆ ನಿಗದಿಪಡಿಸಿದ ದಿನಾಂಕಗಳ/ಸಮಯದ ನಂತರ ಆಯೋಗದಲ್ಲಿ ಸ್ವೀಕೃತವಾಗುವ ಮನವಿ/ದಾಖಲೆ/ ಅನುಬಂಧ–'ಡಿ' ಯನ್ನು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರ ಮಾಡದೆ ನೇರವಾಗಿ ತಿರಸ್ಕರಿಸಲಾಗುತ್ತದೆ. <u>ಅನುಬಂಧ–'ಡಿ' ತಿರಸ್ಕೃತಗೊಂಡ ಅಭ್ಯರ್ಥಿಗಳ ಪಟ್ಟಿಯನ್ನು ಮಾತ್ರ ಆಯೋಗದ ವೆಬ್‌ಸೈಟ್‌ನಲ್ಲಿ ಬಿತ್ತರಿಸಲಾಗುವುದು.</u>

6. ಪರೀಕ್ಷೆಗೆ ಹಾಜರಾಗಬಯಸುವ ಅಭ್ಯರ್ಥಿಗಳು ಒಂದು ಅರ್ಜಿಯಲ್ಲಿ **<u>ಗರಿಷ್ಠ ಎಂಟು ವಿಷಯಗಳನ್ನು</u>** ಆಯ್ಕೆ ಮಾಡಿಕೊಳ್ಳಬಹುದು.

7. <u>ಅರ್ಜಿ ಭರ್ತಿ ಮಾಡುವ ಸಂದರ್ಭದಲ್ಲಿ ಅಭ್ಯರ್ಥಿಗಳು ಆಯ್ಕೆ ಮಾಡಿಕೊಳ್ಳುವ ವಿಷಯ ಮತ್ತು ವಿಷಯ ಸಂಕೇತಗಳನ್ನು ಬಹು ಎಚ್ಚರಿಕೆಯಿಂದ ಭರ್ತಿ ಮಾಡಬೇಕು. ತಪ್ಪಾಗಿ ಆಯ್ಕೆ ಮಾಡಿಕೊಂಡು ಆನಂತರ ಬದಲಾವಣೆ ಮಾಡುವಂತೆ ಕೋರಿ ಸಲ್ಲಿಸಲಾಗುವ ಮನವಿಗಳನ್ನು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವಿಲ್ಲದೆ ನೇರವಾಗಿ ತಿರಸ್ಕರಿಸಲಾಗುವುದು.</u>

8. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ವಿವರಗಳನ್ನು ಸರಿಯಾಗಿ ನಮೂದಿಸಲಾಗಿದೆಯೇ ಎಂಬುದನ್ನು ಗಮನಿಸಿದ ನಂತರವೇ Submit ಮಾಡಬೇಕು. ಆ ನಂತರ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ವಿವರಗಳನ್ನು ಸರಿಪಡಿಸಿಕೊಳ್ಳುವಂತೆ ಸಲ್ಲಿಸುವ ಮನವಿಗಳನ್ನು ಅಭ್ಯರ್ಥಿಗೆ ಮಾಹಿತಿ ನೀಡದೇ ತಿರಸ್ಕರಿಸಲಾಗುವುದು.

9. **<u>ವಸ್ತು ನಿಷ್ಠ ಬಹು ಆಯ್ಕೆ ವಿಧಾನದ ಪರೀಕ್ಷೆಗಳು/ ವಿವರಣಾತ್ಮಕ ಪರೀಕ್ಷೆಗಳಿಗೆ ಗಂಟೆ ಬಾರಿಸುವ ಸಮಯ ಹಾಗೂ ಕೈಗೊಳ್ಳಬೇಕಾದ ಕ್ರಮಗಳು:–</u>**

| ಗಂಟೆ | ಪೂರ್ವಾಹ್ನ | ಅಪರಾಹ್ನ | ವಿವರ |
|---|---|---|---|
| ಮೊದಲನೇ ಗಂಟೆ | ಬೆಳಿಗ್ಗೆ 9:30 | ಮಧ್ಯಾಹ್ನ 1:30 | ಪ್ರವೇಶ ಪತ್ರ ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರ ಬೆಳಗಿನ ಅಧಿವೇಶನಕ್ಕೆ 9:30 ಗಂಟೆಗೆ ಮತ್ತು ಮಧ್ಯಾಹ್ನದ ಅಧಿವೇಶನಕ್ಕೆ 1:30 ಗಂಟೆಗೆ ಪರೀಕ್ಷಾ ಕೊಠಡಿಗೆ ಪ್ರವೇಶಿಸಲು ಅನುಮತಿಸತಕ್ಕದ್ದು. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಗೆ ಹಾಜರಾಗಿ ತಮ್ಮ ನೋಂದಣಿ ಸಂಖ್ಯೆ ನಮೂದಿಸಿದ ಆಸನದಲ್ಲಿ ಮಾತ್ರ ಕುಳಿತುಕೊಳ್ಳತಕ್ಕದ್ದು. ಬೇರೆ ಅಭ್ಯರ್ಥಿಯ ಸ್ಥಳದಲ್ಲಿ ಹಾಜರಾಗಿದ್ದಲ್ಲಿ ಅವರ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು. ಕೊಠಡಿ ಸಂವೀಕ್ಷಕರು ನಾಮಿನಲ್ ರೋಲ್‌ನಲ್ಲಿರುವ ಫೋಟೋ ಮತ್ತು ಸಹಿಗಳನ್ನು ಪರಾಮರ್ಶಿಸಿ ಅಭ್ಯರ್ಥಿಯ ಗುರುತನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಆಸೀನರಾಗಿರುವ ಅಭ್ಯರ್ಥಿಗಳಿಗೆ ಮಾತ್ರ OMR ಹಾಳೆಗಳನ್ನು / ಪ್ರಶ್ನೆಸಹಿತ ಉತ್ತರ ಪತ್ರಿಕೆಗಳನ್ನು ನೀಡಿ ಅದರಲ್ಲಿನ ಅಂಕಣಗಳನ್ನು ಸೂಕ್ತವಾಗಿ ಭರ್ತಿ ಮಾಡುವಂತೆ ಸೂಚಿಸತಕ್ಕದ್ದು. |
| ಎರಡನೇ ಗಂಟೆ | ಬೆಳಿಗ್ಗೆ 09:45 | ಮಧ್ಯಾಹ್ನ 1:45 | ಬೆಳಗಿನ ಅಧಿವೇಶನಕ್ಕೆ 9:45 ಗಂಟೆಗೆ ಮತ್ತು ಮಧ್ಯಾಹ್ನದ ಅಧಿವೇಶನಕ್ಕೆ 1:45 ಗಂಟೆಗೆ ಪರೀಕ್ಷಾ ಉಪ ಕೇಂದ್ರದ ಪ್ರವೇಶ ದ್ವಾರಗಳನ್ನು ಮುಚ್ಚಿಸುವುದು ಹಾಗೂ ಯಾವುದೇ ಅಭ್ಯರ್ಥಿಗೆ ಪರೀಕ್ಷಾ ಉಪ ಕೇಂದ್ರದೊಳಗೆ ಪ್ರವೇಶಿಸಲು ಅನುಮತಿಸುವಂತಿಲ್ಲ. |

––3

| | | | |
|---|---|---|---|
| ಮೂರನೇ ಗಂಟೆ | ಬೆಳಿಗ್ಗೆ 10:00 | ಮಧ್ಯಾಹ್ನ 2:00 | ಪ್ರಶ್ನೆ ಪುಸ್ತಿಕೆ/ಪ್ರಶ್ನೆಸಹಿತ ಉತ್ತರ ಪತ್ರಿಕೆಗಳನ್ನು ಹಂಚತಕ್ಕದ್ದು ಹಾಗೂ ಪ್ರಶ್ನೆ ಪುಸ್ತಿಕೆ/ಪ್ರಶ್ನೆಸಹಿತ ಉತ್ತರ ಪತ್ರಿಕೆಗಳಲ್ಲಿ ನೀಡಿರುವ ಸೂಚನೆಗಳನ್ನು ಓದಿಕೊಂಡ ನಂತರ ಉತ್ತರಿಸಲು ಸೂಚಿಸತಕ್ಕದ್ದು. |
| ನಾಲ್ಕನೇ ಗಂಟೆ | ಬೆಳಿಗ್ಗೆ 11:55/ ಬೆಳಿಗ್ಗೆ 12:55 | ಮಧ್ಯಾಹ್ನ 2.55/ ಮಧ್ಯಾಹ್ನ 3:55/ ಸಂಜೆ 4:55 | ಪರೀಕ್ಷೆ ಮುಕ್ತಾಯಕ್ಕೆ 5 ನಿಮಿಷ ಮಾತ್ರ ಉಳಿದಿದೆ ಎಂದು ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು. ಪರೀಕ್ಷಾ ಕೊಠಡಿಯ ಬಾಗಿಲನ್ನು ಮುಚ್ಚತಕ್ಕದ್ದು. |
| ಐದನೆಯ ಮುಕ್ತಾಯದ ಗಂಟೆ | ಮಧ್ಯಾಹ್ನ 12:00/ ಮಧ್ಯಾಹ್ನ 1:00 | ಸಂಜೆ 3.00/ ಸಂಜೆ 4:00/ ಸಂಜೆ 5:00 | ಉತ್ತರಿಸುವುದನ್ನು ನಿಲ್ಲಿಸುವಂತೆ ಹಾಗೂ ಅವರ ಸ್ಥಳದಲ್ಲಿಯೇ ಕುಳಿತಿರುವಂತೆ ಅಭ್ಯರ್ಥಿಗಳಿಗೆ ಸೂಚಿಸುವುದು. ಹಾಜರಾದ ಎಲ್ಲಾ ಅಭ್ಯರ್ಥಿಗಳ ಮೂಲ OMR ಹಾಳೆಗಳಿರುವುದನ್ನು/ಉತ್ತರ ಪತ್ರಿಕೆಗಳಿರುವುದನ್ನು ಖಚಿತಪಡಿಸಿಕೊಂಡ ಬಳಿಕವೇ ಅಭ್ಯರ್ಥಿಗಳಿಗೆ ಹೊರ ಹೋಗಲು ಅನುಮತಿಸತಕ್ಕದ್ದು. |

**10. ಸೂಚನೆಗಳು:–**

(1) ಸ್ಥಳೀಯ ಅಭ್ಯರ್ಥಿಗಳು, ಸ್ಟೈಪೆಂಡರಿ ಪದವೀಧರರು, ದೈನಿಕ ಮುಜರಾಯಿ ಮಾಸಿಕ ವೇತನದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಗಳು, ಕರಾರು ಆಧಾರದಲ್ಲಿ ಹಾಗೂ ಅನುದಾನಿತ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಗಳು ಮತ್ತು ಸರ್ಕಾರಿ ನೌಕರರಲ್ಲದ ವ್ಯಕ್ತಿಗಳು ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗುವುದಿಲ್ಲ.

(2) ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ನೌಕರರು ತಮ್ಮ ಮೇಲಧಿಕಾರಿಗಳಿಂದ ಕಡ್ಡಾಯವಾಗಿ ಲಿಖಿತ ಅನುಮತಿ ಪಡೆದು ಅರ್ಜಿ ಸಲ್ಲಿಸತಕ್ಕದ್ದು. ಮುಂದೆ ಆಯೋಗವು ಅಪೇಕ್ಷಿಸಿದ ಸಂದರ್ಭದಲ್ಲಿ ಅಭ್ಯರ್ಥಿಗಳು ಲಿಖಿತ ಅನುಮತಿ ಪತ್ರವನ್ನು ಹಾಜರುಪಡಿಸಬೇಕು ತಪ್ಪಿದಲ್ಲಿ ಆಯೋಗವು ನಿಯಮಗಳನ್ವಯ ತಗೆದುಕೊಳ್ಳುವ ಕ್ರಮಕ್ಕೆ ಬದ್ಧರಾಗಿರತಕ್ಕದ್ದು.

(3) ಇಲಾಖಾ ಪರೀಕ್ಷೆಗಳಿಗೆ ಆನ್‌ಲೈನ್ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅಭ್ಯರ್ಥಿಯು ಕಡ್ಡಾಯವಾಗಿ ನಿಗದಿಪಡಿಸಿರುವ ಪರೀಕ್ಷಾ ಶುಲ್ಕವನ್ನು ಮತ್ತು ಉತ್ತೀರ್ಣತೆಯ ಪ್ರಮಾಣ ಪತ್ರ ರವಾನಿಸುವ ಅಂಚೆ ವೆಚ್ಚ **₹ 30/-** ಅನ್ನು ಪಾವತಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(4) ಶುಲ್ಕ ಪಾವತಿಸದ, ಅಪೂರ್ಣ ಮಾಹಿತಿಯುಳ್ಳ ಅರ್ಜಿಗಳನ್ನು ಮತ್ತು ಆನ್‌ಲೈನ್ ವಿಧಾನವನ್ನು ಹೊರತುಪಡಿಸಿ ಇತರೆ ಯಾವುದೇ ರೂಪದಲ್ಲಿ/ ವಿಧಾನದಲ್ಲಿ ಇಲಾಖಾ ಪರೀಕ್ಷೆಗಾಗಿ ಸಲ್ಲಿಸಿದ ಅರ್ಜಿಗಳನ್ನು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವಿಲ್ಲದೆ/ಸೂಚನೆಯನ್ನೂ ನೀಡದೇ ತಿರಸ್ಕರಿಸಲಾಗುವುದು.

(5) ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಭರ್ತಿ ಮಾಡುವ ಮುನ್ನ ಆಯೋಗದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಸೂಚನೆಗಳನ್ನು ಗಮನಿಸಿ, ಆ ಸೂಚನೆಗಳಿಗೆ ಅನುಸಾರವಾಗಿಯೇ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.

(6) ಆನ್‌ಲೈನ್ ಅರ್ಜಿಯಲ್ಲಿ ತಪ್ಪು ಮಾಹಿತಿಗಳನ್ನು ನೀಡಿರುವುದು ಗಮನಕ್ಕೆ ಬಂದಲ್ಲಿ ಅಂತಹ ಅಭ್ಯರ್ಥಿಗಳ ವಿರುದ್ಧ ಆಯೋಗವು ಶಿಸ್ತು ಕ್ರಮ / ಕಾನೂನಿನನ್ವಯ ಸೂಕ್ತ ಕ್ರಮಕೈಗೊಳ್ಳುವುದು.

(7) ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಶುಲ್ಕವನ್ನು ಸ್ಕ್ಯಾನರ್ ಸೌಲಭ್ಯವಿರುವ ಗಣಕೀಕೃತ ಅಂಚೆ ಕಛೇರಿಯ (e-payment post office only) ರಾಜ್ಯದ ಯಾವುದೇ ಶಾಖೆಯಲ್ಲಿ ಅಂಚೆ ಕಛೇರಿಯ ವ್ಯವಹಾರದ ವೇಳೆಯಲ್ಲಿ ಸಂದಾಯ ಮಾಡಬಹುದಾಗಿದೆ, ಈ ಬಗ್ಗೆ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುವ 1713 ಅಂಚೆ ಕಛೇರಿ ಶಾಖೆಗಳ ಪಟ್ಟಿಯನ್ನು ನೋಡತಕ್ಕದ್ದು. ಈ ಅಂಚೆ ಕಛೇರಿಯ ಶಾಖೆಗಳನ್ನು ಹೊರತುಪಡಿಸಿ ಉಳಿದ ಶಾಖೆಗಳಲ್ಲಿ ಪಾವತಿಸಲು ಅವಕಾಶವಿಲ್ಲ. ಈ ಮೇಲ್ಕಂಡ ವಿಧಾನದ ಶುಲ್ಕ ಪಾವತಿಯನ್ನು ಹೊರತುಪಡಿಸಿ ಇತರೆ ಯಾವುದೇ ರೀತಿಯಲ್ಲಿ ಸಂದಾಯ ಮಾಡುವ ಶುಲ್ಕವನ್ನು ತಿರಸ್ಕರಿಸಲಾಗುವುದು. ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ ಅಥವಾ ಅದನ್ನು ಆಯೋಗವು ನಡೆಸುವ ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

(8) ನಿಗದಿಪಡಿಸಿದ ಕೊನೆಯ ದಿನಾಂಕದಂದು ಎದುರಾಗಬಹುದಾದ ಸಮಸ್ಯೆ/ತಾಂತ್ರಿಕ ಸಮಸ್ಯೆಗಳಿಂದ ಪಾರಾಗಲು ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಕಾಯದೇ ಸಾಕಷ್ಟು ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸಲು ಪ್ರಯತ್ನಿಸತಕ್ಕದ್ದು.

(9) ಅಭ್ಯರ್ಥಿಯು ತನ್ನ ಹುದ್ದೆಗೆ ಸಂಬಂಧಿಸಿದಂತೆ 1974ರ ಕರ್ನಾಟಕ ನಾಗರಿಕ ಸೇವೆಗಳು (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು)ನಿಯಮಾವಳಿ ರೀತ್ಯಾ ಷೆಡ್ಯೂಲ್–IIರಲ್ಲಿ ಕಡ್ಡಾಯಗೊಳಿಸಿದ ವಿಷಯಗಳಿಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ತನಗೆ ಸಂಬಂಧಪಡದ ಇತರೇ ಇಲಾಖೆಗಳ ವಿಷಯಗಳಲ್ಲಿ ಪರೀಕ್ಷೆ ಬರೆಯಲು ಯಾವುದೇ ಕಾರಣಕ್ಕೂ ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ. ಹಾಗೆಯೇ ಅಭ್ಯರ್ಥಿಯು ತಾನು ಶುಲ್ಕ ಸಂದಾಯ ಮಾಡಿರುವೆನೆಂಬ ಮಾತ್ರಕ್ಕೆ ಪರೀಕ್ಷೆ ಬರೆಯಲು ಹಕ್ಕುಳ್ಳವನಾಗಿರುವೆನೆಂದು ಭಾವಿಸತಕ್ಕದ್ದಲ್ಲ. ಈ ಬಗ್ಗೆ ಆಯೋಗದ ತೀರ್ಮಾನವೇ ಅಂತಿಮವಾಗಿರುತ್ತದೆ.

––4

**11) <u>ಎಸ್.ಎ.ಎಸ್. ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳಿಗೆ ವಿಶೇಷವಾದ ಸೂಚನೆಗಳು</u>:** ಕರ್ನಾಟಕ ನಾಗರಿಕ ಸೇವೆಗಳು (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರಲ್ಲಿನ ಷೆಡ್ಯೂಲ್–IIರಲ್ಲಿ ಕಡ್ಡಾಯಗೊಳಿಸಿದ ಇಲಾಖೆಗಳ ನೌಕರರು ಮಾತ್ರ ಸಬಾರ್ಡಿನೇಟ್ ಅಕೌಂಟ್ಸ್ ಸರ್ವಿಸ್ (ಎಸ್.ಎ.ಎಸ್.) ವಿಷಯಗಳಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಎಸ್.ಎ.ಎಸ್ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕಾಗುವ ನೌಕರರು ಪ್ರಥಮ ದರ್ಜೆ/ದ್ವಿತೀಯ ದರ್ಜೆ ಸಹಾಯಕರಾಗಿದ್ದಲ್ಲಿ ಅವರು ಸೇವೆಗೆ ನೇಮಕಗೊಂಡ ದಿನಾಂಕದಿಂದ ಪ್ರಥಮ ದರ್ಜೆ ಸಹಾಯಕರಾಗಿ ಮೂರು ವರ್ಷಗಳಿಗಿಂತ ಕಡಿಮೆ ಇರದ ಅಥವಾ ದ್ವಿತೀಯ ದರ್ಜೆ ಸಹಾಯಕರಾಗಿ ಆರು ವರ್ಷಗಳಿಗಿಂತ ಕಡಿಮೆ ಇರದ ಅವಧಿಯ ಸೇವೆ ಸಲ್ಲಿಸಿದ್ದು, ಅಕೌಂಟ್ಸ್ ಹೈಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಲ್ಲಿ ಮಾತ್ರ ಸದರಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅಂತಹ ಅಭ್ಯರ್ಥಿಗಳು ಅವರ ಸೇವಾ ಅವಧಿಯನ್ನು ಮತ್ತು ಅಕೌಂಟ್ಸ್ ಹೈಯರ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾದ ಬಗ್ಗೆ ವಿವರಗಳನ್ನು ಆನ್‌ಲೈನ್ **<u>ಅರ್ಜಿಯ ನಿಗದಿತ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು ಹಾಗೂ ಈ ಬಗ್ಗೆ ಅಧಿಸೂಚನೆಯಲ್ಲಿ ನೀಡಲಾಗಿರುವ ಅನುಬಂಧ–'ಡಿ' ನಮೂನೆಯಲ್ಲಿ ತಮ್ಮ ಕಛೇರಿ ಮುಖ್ಯಸ್ಥರಿಂದ ಪ್ರಮಾಣಪತ್ರ ಪಡೆದು ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 20/12/2018ರಂದು ಸಂಜೆ 5:00 ಗಂಟೆಯೊಳಗೆ ಆಯೋಗದ ಕಛೇರಿಯಲ್ಲಿ ಸ್ವೀಕೃತವಾಗುವಂತೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸತಕ್ಕದ್ದು</u>.** ನಿಗದಿತ ದಿನಾಂಕ ಮತ್ತು ಸಮಯದ ನಂತರ ದಾಖಲೆಗಳನ್ನು ಸಲ್ಲಿಸುವ ಅಭ್ಯರ್ಥಿಗಳ ಅರ್ಜಿ/ಮನವಿಗಳನ್ನು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವಿಲ್ಲದೆ/ಸೂಚನೆಯನ್ನು ನೀಡದೆ ತಿರಸ್ಕರಿಸಲಾಗುವುದು.

(ಅ) ಎಸ್.ಎ.ಎಸ್. ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರಿಕ ಸೇವೆಗಳು (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರಲ್ಲಿನ ಷೆಡ್ಯೂಲ್–Iರ ಕಂಡಿಕೆ (12)ರಡಿ ಇರುವ ಟಿಪ್ಪಣಿ– (ii) ಇಂತಿದೆ.

> " (ii) Officials who are required to pass the Subordinate Accounts Service Examinations as specified in Schedule II and who have put in a Service of not less than three Years as I Division Clerks and Six Years as II Division Clerks from the date of their appointment and passed the Accounts Higher Examination or its equivalent examination, are eligible to sit for the said examination."

(ಆ) ಕೇಂದ್ರ ಪರಿಹಾರ ಸಮಿತಿಯು ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿರುವ ಸಂಸ್ಥೆಯಾಗಿರುವ ಕಾರಣ ಅಲ್ಲಿಯ ಸಿಬ್ಬಂದಿ ವರ್ಗದವರು ಆಯೋಗವು ನಡೆಸುವ ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಲೋಯರ್, ಅಕೌಂಟ್ಸ್ ಹೈಯರ್, ಜನರಲ್ ಲಾ ಇತ್ಯಾದಿ ಕಡ್ಡಾಯಗೊಳಿಸಲಾದ ಸೇವಾ ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾಗುತ್ತಾರೆ.

(ಇ) ಸರ್ಕಾರವು ಇತರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಸಿಬ್ಬಂದಿ ವರ್ಗದವರಿಗೆ ಇಲಾಖಾ ಪರೀಕ್ಷೆಗಳನ್ನು ನಿಗದಿಪಡಿಸಿ ರಾಜ್ಯಪತ್ರದಲ್ಲಿ ಪ್ರಕಟಿಸಿದಲ್ಲಿ ಅಂತಹವರು ಸಹ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗುತ್ತಾರೆ.

**12. <u>ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ</u>:–**

**ಅಭ್ಯರ್ಥಿಗಳು ಆನ್‌ಲೈನ್(On-line) ಮುಖಾಂತರ ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ಹಂತಗಳನ್ನು ಅನುಕ್ರಮವಾಗಿ ಈ ಕೆಳಕಂಡಂತೆ ವಿವರಿಸಲಾಗಿದೆ.**

<u>ಹಂತ–1:</u> ಅಭ್ಯರ್ಥಿಗಳು ಆಯೋಗದ ಅಧಿಕೃತ ವೆಬ್‌ಸೈಟ್ **'http://kpsc.kar.nic.in'** ನ್ನು ತೆರೆದ ಕೂಡಲೇ ಕಂಪ್ಯೂಟರ್ ಪರದೆಯ ಮೇಲೆ **"ONLINE APPLICATION FOR DEPARTMENTAL EXAMS-SECOND SESSION 2018"** ಎಂದು ಮೂಡುತ್ತದೆ. ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಪರೀಕ್ಷೆಗಳಿಗೆ ಸಂಬಂಧಿಸಿದ ಅಧಿಸೂಚನೆಯನ್ನು ಮತ್ತು ಸೂಚನೆಗಳನ್ನು ಕಡ್ಡಾಯವಾಗಿ ಓದತಕ್ಕದ್ದು ಹಾಗೂ ಅದರಂತೆ ಪಾಲಿಸತಕ್ಕದ್ದು ಮತ್ತು ಅಂತಿಮವಾಗಿ ನಿಯಮ ಮತ್ತು ಷರತ್ತುಗಳನ್ನು ಕೆಳಗಿನ ಚೆಕ್ ಬಾಕ್ಸ್ ಅನ್ನು ಒತ್ತುವ ಮೂಲಕ ಒಪ್ಪಿಕೊಳ್ಳತಕ್ಕದ್ದು ಮತ್ತು **Open Application Button** ಅನ್ನು **Press** ಮಾಡಿ ಮುಂದುವರೆಯಬೇಕು.

**<u>ಸೂಚನೆ:</u>** ಅರ್ಜಿ ಭರ್ತಿ ಮಾಡುವ ಸಮಯದಲ್ಲಿ ಎದುರಾಗುವ ತಾಂತ್ರಿಕ ತೊಂದರೆಗಳಿಗೆ ಸಹಾಯವಾಣಿ ಸಂಖ್ಯೆ: **9606234355** ಅನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳತಕ್ಕದ್ದು.

**Next Instruction>>**

**<u>ಹಂತ–2:</u>** ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಭ್ಯರ್ಥಿಯು ತನ್ನ ಇತ್ತೀಚಿನ ಭಾವಚಿತ್ರವನ್ನು ಒಂದು ಸ್ವಚ್ಛವಾದ ಬಿಳಿ ಹಾಳೆಯ ಮೇಲೆ ಲಗತ್ತಿಸಿ ಅದರ ಕೆಳಗೆ ಕಪ್ಪು ಶಾಯಿಯ ಸ್ಕೆಚ್/ಮಾರ್ಕರ್ ಪೆನ್ನಿನಿಂದ ಸಹಿ ಮಾಡಿ (ಯಾವುದೇ ಕಾರಣಕ್ಕೂ ಭಾವ ಚಿತ್ರದ ಮೇಲೆ ಸಹಿ ಮಾಡಬಾರದು) ನಂತರ ಭಾವಚಿತ್ರ (Photo) ಮತ್ತು ಸಹಿಯನ್ನು ಒಳಗೊಂಡಂತೆ ಈ ಕೆಳಗಿನ ಅಳತೆ ಪ್ರಕಾರ ಸ್ಕ್ಯಾನ್ ಮಾಡಿ ಇಟ್ಟುಕೊಂಡಿರತಕ್ಕದ್ದು.

| ಪಾಸ್‌ಪೋರ್ಟ್ ಭಾವಚಿತ್ರ ಹಾಗೂ ಸಹಿ ಅಳತೆ | ಪಾಸ್ ಪೋರ್ಟ್ ಭಾವಚಿತ್ರ ಹಾಗೂ ಸಹಿಯ ಅಳತೆಗಳು: 45 ಎಂ.ಎಂ (ಉದ್ದ) X 35 ಎಂ.ಎಂ. (ಅಗಲ) |
|---|---|
| file size<100kb | |
| DPI Setting = 100dpi | |
| Image Scale =100% | ಸಹಿ ಅಳತೆ: |
| color =True color | 20 ಎಂ.ಎಂ (ಉದ್ದ) X 35 ಎಂ.ಎಂ. (ಅಗಲ) |
| Type=JPEG/JPG | |

**Next Instruction>>  << Prev Instruction**

**<u>ಹಂತ–3:</u>** ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡತಕ್ಕದ್ದು. ಅರ್ಜಿಯನ್ನು ಭರ್ತಿ ಮಾಡಿದ ನಂತರ ನಮೂದಿಸಿದ ವಿವರಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಿಕೊಂಡು, ಎಲ್ಲಾ ವಿವರಗಳು ಸರಿಯಾಗಿರುತ್ತವೆಯೆಂದು ಖಚಿತಪಡಿಸಿಕೊಂಡ ನಂತರ **Preview Button** ಅನ್ನು ಒತ್ತಿ ಮುಂದುವರೆಯಬೇಕು.

**Next Instruction>>  << Prev Instruction**

**<u>ಹಂತ–4:</u>** ನಿಮ್ಮ ಅರ್ಜಿಯ ಯಾವುದೇ ವಿವರಗಳ ಬದಲಾವಣೆ ಅಗತ್ಯವಿದ್ದರೆ ಪೂರ್ವ ದರ್ಶನದ(Preview) ಪುಟದಲ್ಲಿ **Edit Button** ಅನ್ನು ಒತ್ತಿ. ನಿಮ್ಮ ಅರ್ಜಿಯಲ್ಲಿನ ವಿವರಗಳು ಸರಿ ಇರುವುದನ್ನು ಖಚಿತಪಡಿಸಿಕೊಂಡು, ನೀವು ಸ್ಕ್ಯಾನ್ ಮಾಡಿಟ್ಟುಕೊಂಡಿರುವ ಸಹಿಯೊಂದಿಗಿನ ಭಾವಚಿತ್ರವನ್ನು **upload** ಮಾಡಲು **Next Button** ಅನ್ನು ಒತ್ತಿ.

<u>ಸೂಚನೆ:</u> ಈ ಹಂತದಲ್ಲಿ ಪರದೆಯ ಮೇಲೆ ಮೂಡಲಾದ ಅಭ್ಯರ್ಥಿಯ **Application ID** ಮತ್ತು **DOB** ಅನ್ನು ಕಡ್ಡಾಯವಾಗಿ ಬರೆದಿಟ್ಟುಕೊಳ್ಳತಕ್ಕದ್ದು ಹಾಗೂ ಈ ಪ್ರತಿಯನ್ನು ಅಭ್ಯರ್ಥಿಯು ನೋಂದಾಯಿಸಿದ ಇ–ಮೇಲ್ ವಿಳಾಸಕ್ಕೆ ಒಂದು ಸ್ವಯಂಚಾಲಿತ ಇ–ಮೇಲ್ ಮೂಲಕ ಕಳುಹಿಸಲಾಗುವುದು. ಅಭ್ಯರ್ಥಿಯು **Edit Application Button** ಅನ್ನು ಒತ್ತಿ, ಅವರ **Application ID** ಮತ್ತು **DOB** ಅನ್ನು ಬಳಸಿ ತಮ್ಮ ವಿವರಗಳನ್ನು ಅಪ್ ಲೋಡ್ ಮಾಡಬಹುದು ಅಥವಾ ಅಪ್ ಲೋಡ್ ಮಾಡಿದ ಮಾಹಿತಿಯನ್ನು ಬದಲಾಯಿಸಬಹುದು.

**Next Instruction>>  << Prev Instruction**

**<u>ಹಂತ–5:</u>** ಈ ಹಂತದಲ್ಲಿ ಸ್ಕ್ಯಾನ್ ಮಾಡಿಟ್ಟುಕೊಂಡಿರುವ ಸಹಿಯೊಂದಿಗಿನ ಭಾವಚಿತ್ರವನ್ನು **upload** ಮಾಡತಕ್ಕದ್ದು. **Photo upload** ಮಾಡಿದ ನಂತರ **Submit Button** ಮೇಲೆ ಕ್ಲಿಕ್ ಮಾಡತಕ್ಕದ್ದು, ಆನಂತರವೇ **Application Preview** ಮೂಡಲಿದ್ದು, ಅದನ್ನು **Download** ಮಾಡಿಕೊಳ್ಳತಕ್ಕದ್ದು ಮತ್ತು ಅರ್ಜಿಯ ಪ್ರತಿಯನ್ನು ಕಡ್ಡಾಯವಾಗಿ ಅಭ್ಯರ್ಥಿಗಳು ತಮ್ಮೊಂದಿಗೆ ಇಟ್ಟುಕೊಳ್ಳತಕ್ಕದ್ದು. ಆಯೋಗವು ಅಪೇಕ್ಷಿಸಿದಾಗ ಈ ಪ್ರತಿಯನ್ನು ಹಾಜರುಪಡಿಸಬೇಕು. ಅಭ್ಯರ್ಥಿಯು ಈ ಹಂತದಲ್ಲಿ **Submit Button** ಅನ್ನು ಒತ್ತಿದರೆ ತಮ್ಮ ಅರ್ಜಿಯಲ್ಲಿನ ಯಾವುದೇ ವಿವರವನ್ನು ಬದಲಾಯಿಸಲು ಸಾಧ್ಯವಿರುವುದಿಲ್ಲ.

<u>ಸೂಚನೆ:</u> ಅಭ್ಯರ್ಥಿಯು **Photo & Sign Upload Button** ಅನ್ನು ಒತ್ತಿ, ಅವರ **Application ID** ಮತ್ತು **DOB** ಅನ್ನು ಬಳಸಿ ತಮ್ಮ ಸಹಿಯೊಂದಿಗಿನ ಭಾವಚಿತ್ರವನ್ನು ಅಪ್ ಲೋಡ್ ಮಾಡಬಹುದು ಅಥವಾ ತಪ್ಪಾದಲ್ಲಿ ಅದನ್ನು ಬದಲಾಯಿಸಬಹುದು. ಒಂದು ವೇಳೆ ಅಭ್ಯರ್ಥಿಯು ತಮ್ಮ <u>ಸಹಿಯೊಂದಿಗಿನ ಭಾವಚಿತ್ರವನ್ನು</u> ಅಪ್ ಲೋಡ್ ಮಾಡದಿದ್ದರೆ ಅವರ ಅರ್ಜಿಯನ್ನು ತಿರಸ್ಕರಿಸಲಾಗುತ್ತದೆ.

--6

**Next Instruction>> << Prev Instruction**

<u>ಹಂತ–6:</u> ಅರ್ಜಿಯ ಮುದ್ರಣವನ್ನು ಪಡೆಯಲು **Print Application Button** ಅನ್ನು ಒತ್ತಿದ ನಂತರವೇ **Application Preview** ಮೂಡಲಿದ್ದು, ಅಭ್ಯರ್ಥಿಗಳು ಅರ್ಜಿಯ ಪ್ರತಿಯನ್ನು ಕಡ್ಡಾಯವಾಗಿ **Download** ಮಾಡಿಕೊಳ್ಳತಕ್ಕದ್ದು. ಆಯೋಗವು ಅಪೇಕ್ಷಿಸಿದಾಗ ಈ ಪ್ರತಿಯನ್ನು ಹಾಜರುಪಡಿಸಬೇಕು. ನಂತರ ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕೆ **Post Office Challan Button** ಅನ್ನು ಒತ್ತಿ **Challan** ಪ್ರತಿಯನ್ನು **Download** ಮಾಡಿಕೊಂಡು ಕರ್ನಾಟಕ ರಾಜ್ಯದಲ್ಲಿನ ಯಾವುದೇ ಇ–ಪಾವತಿ ಅಂಚೆ ಕಛೇರಿಗೆ ಹೋಗಿ, ನಿಗದಿತ ಅರ್ಜಿ ಶುಲ್ಕವನ್ನು ಪಾವತಿ ಮಾಡಿ. ಅಂತಿಮವಾಗಿ ಪೋಸ್ಟ್ ಆಫೀಸ್ ರಸೀದಿಯನ್ನು ನಿಮ್ಮ **Challan** ಪ್ರತಿಯ ಮೇಲೆ ಅಂಟಿಸುವುದರಿಂದ ನಿಮ್ಮ ಶುಲ್ಕ ಪಾವತಿಯನ್ನು ದೃಢಪಡಿಸಲಾಗುತ್ತದೆ.

<u>ಸೂಚನೆ:</u> ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ **ದಿನಾಂಕ:10–12–2018**(ಅಂಚೆ ಕಛೇರಿಯ ವ್ಯವಹಾರದ ವೇಳೆಯೊಳಗೆ)ರ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್, ಬ್ಯಾಂಕರ್ಸ್ ಚೆಕ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.

**Next Instruction>> << Prev Instruction**

**I Accept that I have gone through all the instructions.**

**ನಾನು ಎಲ್ಲಾ ಸೂಚನೆಗಳನ್ನು ಓದಿರುತ್ತೇನೆ ಮತ್ತು ಒಪ್ಪಿರುತ್ತೇನೆ**

Open Application

**<< Prev Instruction**

**13. <u>ಶುಲ್ಕ ಪಾವತಿ ವಿಧಾನ:–</u>**

ಅ) ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಸಲು ಬೇಕಾದ ಚಲನ್‌ನ ದ್ವಿಪ್ರತಿಯನ್ನು **download** ಮಾಡಿಕೊಳ್ಳಬೇಕು. ಡೌನ್‌ಲೋಡ್ ಮಾಡಿಕೊಂಡ ಚಲನ್‌ನಲ್ಲಿ ಬಾರ್‌ಕೋಡ್ ಇದ್ದು, ಅದು ಹಾಳಾಗದಂತೆ ಅಭ್ಯರ್ಥಿಗಳು ಎಚ್ಚರವಹಿಸತಕ್ಕದ್ದು. **Download** ಮಾಡಿಕೊಂಡ ಚಲನ್ ಮೂಲಕ ರಾಜ್ಯದ ಯಾವುದೇ ಸ್ಕ್ಯಾನರ್ ಸೌಲಭ್ಯವುಳ್ಳ ಗಣಕೀಕೃತ ಅಂಚೆ ಕಛೇರಿಯ ಶಾಖೆಯಲ್ಲಿ ದಿನಾಂಕ:09–11–2018 ರಿಂದ 10–12–2018ರೊಳಗೆ ಅಂಚೆ ಕಛೇರಿಯ ವ್ಯವಹಾರದ ವೇಳೆಯಲ್ಲಿ ಶುಲ್ಕ ಸಂದಾಯ ಮಾಡಬಹುದಾಗಿರುತ್ತದೆ.

ಆ) ಹೋಬಳಿ, ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಗಣಕೀಕೃತ ಸೌಲಭ್ಯವಿರುವ ಅಂಚೆ ಕಛೇರಿಯ 1713 ಶಾಖೆಗಳು ಹಾಗೂ ಅಂಚೆ ಕಛೇರಿಗಳು ಕರ್ತವ್ಯ ನಿರ್ವಹಿಸುವ ಕಾಲಾವಧಿಯ(Timings) ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಇ) **ಈ ಮೇಲ್ಕಂಡ ವಿಧಾನದ ಶುಲ್ಕ ಪಾವತಿಯನ್ನು ಹೊರತುಪಡಿಸಿ ಇತರೆ ಯಾವುದೇ ರೀತಿಯಲ್ಲಿ ಶುಲ್ಕ ಸಂದಾಯ <u>ಮಾಡಲಾಗುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಶುಲ್ಕವನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 10–12–2018 ಆಗಿದ್ದು, ಆ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೇ ತಿರಸ್ಕರಿಸಲಾಗುವುದು. ಅಂಚೆ ಕಛೇರಿಯಲ್ಲಿ ಶುಲ್ಕ ಪಾವತಿಸಿದ ಬಗ್ಗೆ ದೃಢೀಕರಣ ಗೊಂಡಿಲ್ಲದಿರುವ ಅಭ್ಯರ್ಥಿಗಳು ಅಂಚೆ ಕಛೇರಿಯ ಸಹಾಯವಾಣಿ (Help Line) ದೂರವಾಣಿ ಸಂಖ್ಯೆ 080–22392668/ 080–22392600 ಅನ್ನು ಸಂಪರ್ಕಿಸಿ ಸೂಕ್ತ ಮಾಹಿತಿಯನ್ನು ಒದಗಿಸಿ ಶುಲ್ಕ ಪಾವತಿಸಿದ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.</u>**

**<u>ಅರ್ಜಿ ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ನಿಗದಿಪಡಿಸಿದ ದಿನಾಂಕಗಳು:</u>**

| | |
|---|---|
| ➡ <u>ಅರ್ಜಿ ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ಪ್ರಾರಂಭದ ದಿನಾಂಕ:</u> | **09–11–2018** |
| ➡ <u>ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:</u> | **08–12–2018** (ರಾತ್ರಿ **11:45** ಗಂಟೆಯೊಳಗೆ) |
| ➡ <u>ಶುಲ್ಕ ಸಂದಾಯ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕ:</u> | **10–12–2018** (ಅಂಚೆ ಕಛೇರಿಯ ವ್ಯವಹಾರದ ವೇಳೆಯೊಳಗೆ) |

--7

**ವಿಶೇಷ ಸೂಚನೆ:–** ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆಗಳು ಉದ್ಭವಿಸಿದಲ್ಲಿ ಸಹಾಯವಾಣಿ (**Help line**) ಸಂಖ್ಯೆ: **9606234355** ಗಳನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.

**14. ವಿಷಯದ ಹೆಸರು, ವಿಷಯದ ಸಂಕೇತಗಳು ಮತ್ತು ಪ್ರತಿ ವಿಷಯಕ್ಕೆ ನಿಗದಿಪಡಿಸಿದ ಶುಲ್ಕದ ವಿವರಗಳು:–**

ಇಲಾಖಾ ಪರೀಕ್ಷೆಯ ವಿವಿಧ ವಿಷಯಗಳ ಹೆಸರುಗಳು, ಅವುಗಳ ಸಂಕೇತಗಳು ಹಾಗೂ ಸರ್ಕಾರದ ಆದೇಶ ಸಂಖ್ಯೆ. **ಸಿಆಸುಇ 6 ಸೇಲೋಸೇ 2010, ದಿನಾಂಕ: 06–08–2010** ರನ್ವಯ ನಿಗದಿಪಡಿಸಿರುವ ಪರಿಷ್ಕೃತ ಶುಲ್ಕಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ವಿವರಿಸಲಾಗಿದೆ.

| ವಿಷಯ | ವಿಷಯ ಸಂಕೇತ | ನಿಗದಿಪಡಿಸಲಾದ ಶುಲ್ಕ ₹ |
|---|---|---|
| (1) | (2) | (3) |
| ಅಕೌಂಟ್ಸ್ ಲೋಯರ್ | 1 | 50–00 |
| ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–1 | 2 | 50–00 |
| ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–2 | 3 | 50–00 |
| ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ | 4 | 50–00 |
| ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್ | 5 | 50–00 |
| ಫಾರೆಸ್ಟ್ ಪತ್ರಿಕೆ–1 (ಫಾರೆಸ್ಟ್ ಗಾರ್ಡ್‌ಗಳಿಗೆ ಮಾತ್ರ) | 6 | 50–00 |
| ಫಾರೆಸ್ಟ್ ಪತ್ರಿಕೆ–2 (ಫಾರೆಸ್ಟ್ ಗಾರ್ಡ್‌ಗಳಿಗೆ ಮಾತ್ರ) | 7 | 50–00 |
| ಜನರಲ್ ಲಾ ಭಾಗ–2 | 8 | 50–00 |
| ಹೋಮ್ ಗಾರ್ಡ್ಸ್ ಮ್ಯಾನ್ಯುಯಲ್ | 9 | 50–00 |
| ಆಕ್ಟ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವಲಪ್‌ಮೆಂಟ್ | 10 | 50–00 |
| ಮೋಟಾರ್ ವೆಹಿಕಲ್ಸ್ | 11 | 50–00 |
| ಮೈನಿಂಗ್ ಭಾಗ–1 | 12 | 50–00 |
| ಮೈನಿಂಗ್ ಭಾಗ–2 | 13 | 50–00 |
| ಪ್ರಿಸನ್ಸ್ | 14 | 50–00 |
| ಪೋರ್ಟ್ಸ್ ಹೈಯರ್ | 15 | 50–00 |
| ಪೋರ್ಟ್ಸ್ ಲೋಯರ್ | 16 | 50–00 |
| ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–1 | 17 | 50–00 |
| ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–2 | 18 | 50–00 |
| ಯೂಥ್ ಸರ್ವೀಸ್ ಮ್ಯಾನ್ಯುಯಲ್ | 19 | 50–00 |
| ಎಕ್ಸೈಸ್ | 20 | 50–00 |
| ಪೋಲೀಸ್ ಮ್ಯಾನ್ಯುಯಲ್ | 21 | 50–00 |
| ಅಕೌಂಟ್ಸ್ ಹೈಯರ್ | 22 | 100–00 |
| ಕಮರ್ಷಿಯಲ್ ಟ್ಯಾಕ್ಸ್ ಭಾಗ–2 (ಲೋಯರ್) | 23 | 100–00 |
| ಫಾರೆಸ್ಟ್ | 24 | 100–00 |
| ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್ | 25 | 100–00 |
| ಲೇಬರ್ | 26 | 100–00 |
| ಲೋಕಲ್ ಲಾಸ್ ಆಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ | 27 | 100–00 |
| ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್ | 28 | 100–00 |
| ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಲೋಯರ್ | 29 | 100–00 |
| ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–1 | 30 | 100–00 |
| ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–2 | 31 | 100–00 |
| ಪಿ.ಡಬ್ಲ್ಯೂ.ಡಿ. ಲೋಯರ್ | 32 | 100–00 |
| ರಿಜಿಸ್ಟ್ರೇಷನ್ | 33 | 100–00 |
| ಸಿರಿಕಲ್ಚರ್ | 34 | 100–00 |
| ಕೋ–ಆಪರೇಷನ್ | 35 | 100–00 |

--8

| | | |
|---|---|---|
| ಜನರಲ್ ಲಾ ಭಾಗ–1 | 36 | 100–00 |
| ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ | 37 | 100–00 |
| ಮಾರ್ಕೆಟಿಂಗ್ | 38 | 100–00 |
| ರೆವಿನ್ಯೂ ಹೈಯರ್ ಭಾಗ–1 | 39 | 100–00 |
| ರೆವಿನ್ಯೂ ಹೈಯರ್ ಭಾಗ–2 | 40 | 100–00 |
| ರೆವಿನ್ಯೂ ಲೋಯರ್ | 41 | 100–00 |
| ಕಮರ್ಷಿಯಲ್ ಟ್ಯಾಕ್ಸ್ ಭಾಗ–1 (ಹೈಯರ್) | 42 | 100–00 |
| ಕೋ–ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ | 43 | 100–00 |
| ಇನ್ಸೂರೆನ್ಸ್ ಅಡ್ವಾನ್ಸ್ಡ್ | 44 | 100–00 |
| ಇನ್ಸೂರೆನ್ಸ್ ಹೈಯರ್ | 45 | 100–00 |
| ಇನ್ಸೂರೆನ್ಸ್ ಲೋಯರ್ | 46 | 100–00 |
| ಕನ್ನಡ ಭಾಷಾ ಪರೀಕ್ಷೆ | 47 | 100–00 |
| ಫುಡ್ ಅಂಡ್ ಸಿವಿಲ್ ಸಪ್ಲೈಸ್ ಎಕ್ಸಾಮಿನೇಷನ್ | 48 | 100–00 |
| ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ಟ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್ | 49 | 100–00 |
| ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್ | 51 | 50–00 |
| ಕೆ.ಪಿ.ಎಸ್.ಸಿ. ಮ್ಯಾನ್ಯುಯಲ್ | 52 | 50–00 |
| ಕೆ.ಪಿ.ಎಸ್.ಸಿ. ರಿಕ್ರೂಟ್‌ಮೆಂಟ್ ರೂಲ್ಸ್ | 53 | 50–00 |
| ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ–1 | 54 | 100–00 |
| ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ–2 | 55 | 50–00 |
| ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್ | 56 | 50–00 |
| ಟ್ರಾನ್ಸ್‌ಲೇಷನ್ ಟೆಸ್ಟ್ | 58 | 50–00 |
| ಎಸ್.ಎ.ಎಸ್ ಭಾಗ–1 | 61 | 100–00 |
| ಎಸ್.ಎ.ಎಸ್ ಭಾಗ–2 | 62 | 100–00 |
| ಎಸ್.ಎ.ಎಸ್ ಭಾಗ–3 | 63 | 100–00 |
| ಟ್ರೆಜರಿ ಅಕೌಂಟ್ಸ್ ಭಾಗ–1 | 64 | 100–00 |
| ಟ್ರೆಜರಿ ಅಕೌಂಟ್ಸ್ ಭಾಗ–2 | 65 | 100–00 |
| ಎಲೆಕ್ಟ್ರಿಸಿಟಿ ಲಾಸ್ ಎಕ್ಸಾಮಿನೇಷನ್ | 66 | 100–00 |
| ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ–1 | 67 | 50–00 |
| ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್)ಲಾಸ್(ಹೈಯರ್)ಎಕ್ಸಾಮಿನೇಷನ್ ಭಾಗ–2 | 68 | 50–00 |
| ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಲೋಯರ್) ಎಕ್ಸಾಮಿನೇಷನ್ | 70 | 50–00 |
| ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಕ್ಸಾಮಿನೇಷನ್ | 71 | 50–00 |
| ಕನ್ನಡ ಭಾಷೆ (ಐ.ಎ.ಎಸ್, ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಅಧಿಕಾರಿಗಳಿಗೆ ಮಾತ್ರ) | 72 | 100–00 |
| ಕನ್ನಡ ಭಾಷಾ ಮೌಖಿಕ ಪರೀಕ್ಷೆ ಮಾತ್ರ (ಕಂಡಿಕೆ–24(6) (ಉ) ಗಮನಿಸುವುದು) | 73 | 50–00 |
| ವಿಕಲ ಚೇತನರು ಮತ್ತು ಹಿರಿಯ ನಾಗರೀಕರಿಗೆ ಸಂಬಂಧಿಸಿದ ಅಧಿನಿಯಮ ಮತ್ತು ನಿಯಮಗಳು | 74 | 50–00 |

**15. <u>ಪ್ರಮಾಣಪತ್ರ ರವಾನೆ ಶುಲ್ಕ</u>:–** ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪ್ರಮಾಣಪತ್ರಗಳನ್ನು ನೋಂದಾಯಿತ ಅಂಚೆ ಮೂಲಕ ರವಾನಿಸಲಾಗುತ್ತಿದ್ದು, ಈ ಸಂಬಂಧ ಅಭ್ಯರ್ಥಿಗಳು ಮೇಲಿನ ವಿಷಯಗಳಿಗೆ ನಿಗದಿಪಡಿಸಿದ ಪರೀಕ್ಷಾ ಶುಲ್ಕದ ಜೊತೆಗೆ **ನೋಂದಾಯಿತ ಅಂಚೆ (Registered Post)** ವೆಚ್ಚ **₹ 30/-**ಗಳನ್ನೂ ಸಹ ಶುಲ್ಕ ಪಾವತಿಸುವ ಸಂದರ್ಭದಲ್ಲಿಯೇ ಒಟ್ಟಾರೆಯಾಗಿ ಪಾವತಿಸತಕ್ಕದ್ದು.

**16. <u>ಪರೀಕ್ಷಾ ವಿಧಾನ</u>:–**ಇಲಾಖಾ ಪರೀಕ್ಷೆಗೆ ಸಂಬಂಧಿಸಿದ ಕೆಲವು ವಿಷಯಗಳಿಗೆ/ಪತ್ರಿಕೆಗಳಿಗೆ ವಸ್ತುನಿಷ್ಠ ಬಹು ಆಯ್ಕೆ ಮಾದರಿಯಲ್ಲಿ ಹಾಗೂ ಇನ್ನು ಕೆಲವು ವಿಷಯಗಳಿಗೆ/ಪತ್ರಿಕೆಗಳಿಗೆ ವಿವರಣಾತ್ಮಕ ಮಾದರಿಯಲ್ಲಿ ಪರೀಕ್ಷೆಗಳನ್ನು ನಡೆಸಲಾಗುವುದು. ವಸ್ತು ನಿಷ್ಠ ಮಾದರಿ ಮತ್ತು ವಿವರಣಾತ್ಮಕ ಮಾದರಿಯ ಪರೀಕ್ಷೆ ನಡೆಸಲಾಗುವ ವಿಷಯಗಳ / ಪತ್ರಿಕೆಗಳ ಮಾಹಿತಿಯು ಕೆಳಗಿನಂತಿದೆ.

**(1) ಇಲಾಖಾ ಪರೀಕ್ಷೆಗಳಲ್ಲಿ ಕೆಳಕಂಡ ವಿಷಯ/ಪತ್ರಿಕೆಗಳಿಗೆ ವಸ್ತುನಿಷ್ಠ ಬಹುಆಯ್ಕೆ ಮಾದರಿಯಲ್ಲಿ (OBJECTIVE TYPE MULTIPLE CHOICE) ಪರೀಕ್ಷೆ ನಡೆಸಲಾಗುವುದು.**

| ಕ್ರಮ ಸಂಖ್ಯೆ | ವಿ ಷ ಯ | ಕ್ರಮ ಸಂಖ್ಯೆ | ವಿ ಷ ಯ |
|---|---|---|---|
| (1) | (2) | (1) | (2) |
| 1 | ಅಕೌಂಟ್ಸ್ ಲೋಯರ್ | 33 | ರಿಜಿಸ್ಟ್ರೇಷನ್ |
| 2 | ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–1 | 34 | ಸಿರಿಕಲ್ಚರ್ |
| 3 | ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–2 | 35 | ಕೋ–ಆಪರೇಷನ್ |
| 4 | ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ | 36 | ಜನರಲ್ ಲಾ ಭಾಗ–1 |
| 5 | ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್ | 37 | ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ |
| 6 | ಫಾರೆಸ್ಟ್ ಪತ್ರಿಕೆ–1 (ಫಾರೆಸ್ಟ್ ಗಾರ್ಡ್‌ಗಳಿಗೆ ಮಾತ್ರ) | 38 | ಮಾರ್ಕೆಟಿಂಗ್ |
| 7 | ಫಾರೆಸ್ಟ್ ಪತ್ರಿಕೆ–2 (ಫಾರೆಸ್ಟ್ ಗಾರ್ಡ್‌ಗಳಿಗೆ ಮಾತ್ರ) | 39 | ರೆವಿನ್ಯೂ ಹೈಯರ್ ಭಾಗ–1 |
| 8 | ಜನರಲ್ ಲಾ ಭಾಗ–2 | 40 | ರೆವಿನ್ಯೂ ಹೈಯರ್ ಭಾಗ–2 |
| 9 | ಹೋಮ್ ಗಾರ್ಡ್ಸ್ ಮ್ಯಾನ್ಯುಯಲ್ | 41 | ರೆವಿನ್ಯೂ ಲೋಯರ್ |
| 10 | ಆಕ್ಟ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವಲಪ್‌ಮೆಂಟ್ | 42 | ಕಮರ್ಷಿಯಲ್ ಟ್ಯಾಕ್ಸ್ ಭಾಗ–1 (ಹೈಯರ್) |
| 11 | ಮೋಟಾರ್ ವೆಹಿಕಲ್ಸ್ | 43 | ಕೋ–ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ |
| 12 | ಮೈನಿಂಗ್ ಭಾಗ–1 | 44 | ಇನ್ಸೂರೆನ್ಸ್ ಅಡ್ವಾನ್ಸ್ಡ |
| 13 | ಮೈನಿಂಗ್ ಭಾಗ–2 | 45 | ಇನ್ಸೂರೆನ್ಸ್ ಹೈಯರ್ ಪತ್ರಿಕೆ–1 ಮತ್ತು ಪತ್ರಿಕೆ–3 |
| 14 | ಪ್ರಿಸನ್ಸ್ | 46 | ಇನ್ಸೂರೆನ್ಸ್ ಲೋಯರ್ ಪತ್ರಿಕೆ–1 ಮತ್ತು ಪತ್ರಿಕೆ–3 |
| 15 | ಪೋರ್ಟ್ಸ್ ಹೈಯರ್ | 47 | ಫುಡ್ ಅಂಡ್ ಸಿವಿಲ್ ಸಪ್ಲೈಸ್ ಎಕ್ಸಾಮಿನೇಷನ್ |
| 16 | ಪೋರ್ಟ್ಸ್ ಲೋಯರ್ | 48 | ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ಟ್ ಫೋರಮ್ ಸರ್ವೀಸ್ ಎಕ್ಸಾಮಿನೇಷನ್ |
| 17 | ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–1 | 49 | ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್ |
| 18 | ಸೋಷಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–2 | 50 | ಕೆ.ಪಿ.ಎಸ್.ಸಿ. ಮ್ಯಾನ್ಯುಯಲ್ |
| 19 | ಯೂಥ್ ಸರ್ವೀಸ್ ಮ್ಯಾನ್ಯುಯಲ್ | 51 | ಕೆ.ಪಿ.ಎಸ್.ಸಿ. ರಿಕ್ರೂಟ್‌ಮೆಂಟ್ ರೂಲ್ಸ್ |
| 20 | ಎಕ್ಸೈಸ್ | 52 | ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ–1 |
| 21 | ಪೊಲೀಸ್ ಮ್ಯಾನ್ಯುಯಲ್ | 53 | ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್ |
| 22 | ಅಕೌಂಟ್ಸ್ ಹೈಯರ್ | 54 | ಎಸ್.ಎ.ಎಸ್. ಭಾಗ–1 ಪತ್ರಿಕೆ–2 |
| 23 | ಕಮರ್ಷಿಯಲ್ ಟ್ಯಾಕ್ಸ್ ಭಾಗ–2 (ಲೋಯರ್) | 55 | ಎಸ್.ಎ.ಎಸ್. ಭಾಗ–2 ಪತ್ರಿಕೆ–1 |
| 24 | ಫಾರೆಸ್ಟ್ | 56 | ಎಸ್.ಎ.ಎಸ್. ಭಾಗ–3 ಪತ್ರಿಕೆ–2 ಮತ್ತು 4 |
| 25 | ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್ | 57 | ಟ್ರೆಜರಿ ಅಕೌಂಟ್ಸ್ ಭಾಗ–1 ಪತ್ರಿಕೆ–2 ಮತ್ತು ಪತ್ರಿಕೆ–3 |
| 26 | ಲೇಬರ್ | 58 | ಟ್ರೆಜರಿ ಅಕೌಂಟ್ಸ್ ಭಾಗ–2 |
| 27 | ಲೋಕಲ್ ಲಾಸ್ ಆಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ | 59 | ಎಲೆಕ್ಟ್ರಿಸಿಟಿ ಲಾಸ್ ಎಕ್ಸಾಮಿನೇಷನ್ |
| 28 | ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ–1 | 60 | ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ–1 |
| 29 | ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಲೋಯರ್ | 61 | ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಲೋಯರ್) ಎಕ್ಸಾಮಿನೇಷನ್ |
| 30 | ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–1 ಪತ್ರಿಕೆ–2 | 62 | ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಕ್ಸಾಮಿನೇಷನ್ |
| 31 | ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–2 | 63 | ವಿಕಲ ಚೇತನರು ಮತ್ತು ಹಿರಿಯ ನಾಗರೀಕರಿಗೆ ಸಂಬಂಧಿಸಿದ ಅಧಿನಿಯಮ ಮತ್ತು ನಿಯಮಗಳು |
| 32 | ಪಿ.ಡಬ್ಲ್ಯೂ.ಡಿ. ಲೋಯರ್ | | |

––10

ಅ) <u>ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಪರೀಕ್ಷೆಗೆ ಓ.ಎಂ.ಆರ್. (OMR SHEET) ಹಾಳೆಯಲ್ಲಿ ಮಾತ್ರ ಉತ್ತರಿಸಬೇಕು. ಓ.ಎಂ.ಆರ್. ಉತ್ತರಹಾಳೆ ಮಾದರಿ ಪ್ರತಿಯನ್ನು ಹಾಗೂ ಅಭ್ಯರ್ಥಿಗಳಿಗೆ ನೀಡಲಾದ ಸೂಚನೆಗಳನ್ನು ಆಯೋಗದ ವೆಬ್‌ಸೈಟ್‌ನಲ್ಲಿ ನೋಡಬಹುದು. ಓ.ಎಂ.ಆರ್. ಉತ್ತರ ಹಾಳೆಯಲ್ಲಿನ ನಿಗದಿತ ಅಂಕಣಗಳಲ್ಲಿ ಸರಿಯಾದ ಮಾಹಿತಿಯನ್ನು ಬರೆದು ಗುರುತಿಸಿ ಸಹಿ ಮಾಡಬೇಕು. ಇಲ್ಲವಾದಲ್ಲಿ ಅಂತಹ ಓ.ಎಂ.ಆರ್. ಉತ್ತರ ಹಾಳೆಯನ್ನು ರದ್ದುಪಡಿಸಲಾಗುತ್ತದೆ.</u>

ಆ) ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ವಿಷಯಗಳಲ್ಲಿನ ಪಶ್ನೆಪತ್ರಿಕೆಗಳಲ್ಲಿ ಪ್ರತಿ ಪ್ರಶ್ನೆಗೂ ನಾಲ್ಕು ಸಂಭವನೀಯ ಉತ್ತರಗಳಿರುತ್ತವೆ. ಪ್ರತಿ ಪ್ರಶ್ನೆಗೆ ನೀಡಲಾದ ನಾಲ್ಕು ಉತ್ತರಗಳ ಪೈಕಿ ಒಂದು ಸರಿ ಉತ್ತರವನ್ನು ಆಯ್ಕೆ ಮಾಡಿ ಉತ್ತರಿಸಬೇಕಿರುತ್ತದೆ. ಪ್ರತಿ ಪ್ರಶ್ನೆಗೂ ಆಯ್ಕೆ ಮಾಡಲಾದ ಉತ್ತರವು ಎಲ್ಲಾ ರೀತಿಯಿಂದಲೂ ಸಮರ್ಪಕವಾಗಿರುತ್ತದೆಯೆಂದು ಅರಿತು, ದೃಢಪಡಿಸಿಕೊಂಡ ನಂತರವೇ ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಅಭ್ಯರ್ಥಿಗಳು ನೀಲಿ ಅಥವಾ ಕಪ್ಪು ಬಣ್ಣದ ಬಾಲ್‌ಪಾಯಿಂಟ್ ಪೆನ್ನಿನಿಂದ ಎನ್‌ಕೋಡ್ (ಸಂಕೇತ ಗುರುತು) ಮಾಡಬೇಕು. ತರುವಾಯ ತಪ್ಪು ಉತ್ತರಗಳನ್ನು ಯಾವುದೇ ಸಂದರ್ಭದಲ್ಲಿ ಅಳಿಸಲು ಪ್ರಯತ್ನಿಸಬಾರದು. ಉತ್ತರಿಸುವ ವೃತ್ತಗಳಿಗೆ <u>ವೈಟ್ ಫ್ಲೂಯಿಡ್ ಬಳಸಿದಲ್ಲಿ ಅಂತಹ ಓ.ಎಂ.ಆರ್. ಉತ್ತರ ಹಾಳೆಗಳನ್ನು ಅಸಿಂಧುಗೊಳಿಸಲಾಗುವುದು.</u>

**(2) <u>ಈ ಕೆಳಕಂಡ ವಿಷಯ/ಪತ್ರಿಕೆಗಳಿಗೆ ವಿವರಣಾತ್ಮಕ ಮಾದರಿಯಲ್ಲಿ (Descriptive Type) ಪರೀಕ್ಷೆ ನಡೆಸಲಾಗುವುದು.</u>**

| ಕ್ರಮ ಸಂಖ್ಯೆ | ವಿಷಯ | ವಿಷಯ ಸಂಕೇತ |
|---|---|---|
| 1 | ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್)ಎಕ್ಸಾಮಿನೇಷನ್ ಭಾಗ–2, ಪತ್ರಿಕೆ–1 | 68 |
| 2 | ಎಸ್.ಎ.ಎಸ್. ಭಾಗ–1, ಪತ್ರಿಕೆ–1 ಮತ್ತು ಪತ್ರಿಕೆ–3 | 61 |
| 3 | ಎಸ್.ಎ.ಎಸ್. ಭಾಗ–2, ಪತ್ರಿಕೆ–2 ಮತ್ತು ಪತ್ರಿಕೆ–3 | 62 |
| 4 | ಎಸ್.ಎ.ಎಸ್. ಭಾಗ–3, ಪತ್ರಿಕೆ–1, ಪತ್ರಿಕೆ–3 ಮತ್ತು ಪತ್ರಿಕೆ–5 | 63 |
| 5 | ಟ್ರೆಜರಿ ಅಕೌಂಟ್ಸ್ ಭಾಗ–1, ಪತ್ರಿಕೆ–1 | 64 |
| 6 | ಇನ್ಸೂರೆನ್ಸ್ ಹೈಯರ್, ಪತ್ರಿಕೆ–2 | 45 |
| 7 | ಇನ್ಸೂರೆನ್ಸ್ ಲೋಯರ್, ಪತ್ರಿಕೆ–2 | 46 |
| 8 | ಪಿ.ಡಬ್ಲ್ಯೂ.ಡಿ. ಹೈಯರ್ ಭಾಗ–1, ಪತ್ರಿಕೆ–1 | 30 |
| 9 | ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ–2 | 55 |
| 10 | ಕನ್ನಡ ಭಾಷೆ, ಪತ್ರಿಕೆ–1 ಮತ್ತು ಪತ್ರಿಕೆ–2 | 47 |
| 11 | ಕನ್ನಡ ಭಾಷೆ (ಐ.ಎ.ಎಸ್, ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಅಧಿಕಾರಿಗಳಿಗೆ)ಪತ್ರಿಕೆ–1 ಮತ್ತು ಪತ್ರಿಕೆ–2 | 72 |
| 12 | ಟ್ರಾನ್ಸ್‌ಲೇಷನ್ ಟೆಸ್ಟ್ | 58 |
| 13 | ಪ್ರೆಸ್ ಅಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್, ಪತ್ರಿಕೆ–2 | 28 |

**ವಿಶೇಷ ಸೂಚನೆ:–**

ವಿವರಣಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಸೇವಾ ಪರೀಕ್ಷೆಗಳ ಯಾವುದೇ ಪತ್ರಿಕೆಯನ್ನು ಸಂಪೂರ್ಣವಾಗಿ ಆಂಗ್ಲಭಾಷೆಯಲ್ಲಿ ಅಥವಾ ಕನ್ನಡ ಭಾಷೆಯಲ್ಲಿ ಮಾತ್ರ ಉತ್ತರಿಸತಕ್ಕದ್ದು. (ಭಾಷಾಂತರ ಪ್ರಶ್ನೆಗಳನ್ನು ಹೊರತುಪಡಿಸಿ) ಭಾಗಶಃ ಆಂಗ್ಲ ಮತ್ತು ಭಾಗಶಃ ಕನ್ನಡದಲ್ಲಿ ಉತ್ತರಿಸಿದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು <u>ಮೌಲ್ಯಮಾಪನ ಮಾಡದೆ ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.</u>

**17. <u>ಪಠ್ಯ ಕ್ರಮ</u>:–**

(1) ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದ ಪಠ್ಯ ಕ್ರಮಕ್ಕಾಗಿ ಅಭ್ಯರ್ಥಿಗಳು ಕರ್ನಾಟಕ ನಾಗರಿಕ ಸೇವೆಗಳು (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974 ಮತ್ತು ಅದಕ್ಕೆ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗಿರುವ ತಿದ್ದುಪಡಿಗಳನ್ನು ನೋಡಬಹುದು.

––11

(2) ಪ್ರತಿ ವಿಷಯಗಳಲ್ಲಿನ ಪಠ್ಯಕ್ರಮದಲ್ಲಿರುವ (**Syllabus**) ಯಾವುದಾದರೂ ನಿಯಮಗಳು/ಅಧಿನಿಯಮಗಳು ನಿರಸನಗೊಂಡಿದ್ದಲ್ಲಿ (**Repealed**) ಅವುಗಳನ್ನು ಕೈಬಿಟ್ಟು ಹೊಸದಾಗಿ ಸೇರ್ಪಡೆಯಾಗಿರುವ ಹಾಗೂ ಪ್ರಸಕ್ತ ಇಲಾಖೆಗಳಲ್ಲಿ ಚಾಲ್ತಿಯಲ್ಲಿರುವ ನಿಯಮ/ಅಧಿನಿಯಮಗಳನ್ವಯ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ ಪರೀಕ್ಷೆಗಳನ್ನು ನಡೆಸಲಾಗುವುದೆಂದು ಅಭ್ಯರ್ಥಿಗಳ ಗಮನಕ್ಕೆ ತರಲಾಗಿದೆ.

**18. ಕನ್ನಡ ಭಾಷಾ ವಿಷಯದ ಪಠ್ಯ ಕ್ರಮ:-**

(1) ವಿಷಯ ಸಂಕೇತ-72:- ಅಖಿಲ ಭಾರತ ಸೇವಾ ಅಧಿಕಾರಿ (ಐ.ಎ.ಎಸ್/ಐ.ಪಿ.ಎಸ್/ಐ.ಎಫ್.ಎಸ್) ಅಭ್ಯರ್ಥಿಗಳು ತೇರ್ಗಡೆಯಾಗಬೇಕಾಗಿರುವ ಕನ್ನಡ ಭಾಷಾ ಇಲಾಖಾ ಪರೀಕ್ಷೆಗೆ ಸರ್ಕಾರವು ತನ್ನ ಆದೇಶ ಸಂಖ್ಯೆ:ಡಿಪಿಎಆರ್ 168 ಎಸ್ಎಂಇ 94, ದಿನಾಂಕ:12-07-1995ರ ಪ್ರಕಾರ 10ನೇ ತರಗತಿಯ ಕನ್ನಡ ದ್ವಿತೀಯ ಮತ್ತು ತೃತೀಯ ಭಾಷಾ ಪುಸ್ತಕ "**ತಿಳಿಗನ್ನಡ-6**" ಎಂಬ ಪುಸ್ತಕವನ್ನು ನಿಗದಿಪಡಿಸಿದೆ.

(2) ವಿಷಯ ಸಂಕೇತ-47:- ಅಖಿಲ ಭಾರತ ಸೇವಾ ಅಧಿಕಾರಿಗಳನ್ನು ಹೊರತುಪಡಿಸಿ ಕನ್ನಡ ಭಾಷಾ ಇಲಾಖಾ ಪರೀಕ್ಷೆಯ ಇತರ ಅಭ್ಯರ್ಥಿಗಳಿಗೆ:

ಅ) ಕರ್ನಾಟಕ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು ಇವರಿಂದ ಪ್ರಕಾಶನಗೊಂಡಿರುವ ವಿವಿಧ ಲೇಖಕರಿಂದ ರಚಿತವಾದ **"ಸತ್ಯಕ್ಕೆ ಬೆಲೆಕೊಟ್ಟ ಗೆಳೆಯರು"** ಎಂಬ ಪಾಠದಿಂದ ಪ್ರಾರಂಭಗೊಳ್ಳುವ **"ಸಣ್ಣ ಕಥೆಗಳು'.'**

**ಮತ್ತು**

ಆ) ಆರನೆಯ ತರಗತಿಯ ಪಠ್ಯ ಪುಸ್ತಕವಾದ **" ಸಿರಿ ಕನ್ನಡ "** ವನ್ನು ನಿಗದಿಪಡಿಸಲಾಗಿದೆ.

**19. ಪರೀಕ್ಷಾ ಕೇಂದ್ರಗಳು:-** ಇಲಾಖಾ ಪರೀಕ್ಷೆಗಳನ್ನು ನಡೆಸಲಾಗುವ ಜಿಲ್ಲಾ ಪರೀಕ್ಷಾ ಕೇಂದ್ರಗಳು ಮತ್ತು ಅವುಗಳ ಸಂಕೇತಗಳು ಈ ಕೆಳಗಿನಂತಿವೆ.

**ಅ) ಪ್ರಥಮ ಹಂತದ ಪರೀಕ್ಷೆಗಳು:- ವಿಷಯ ಸಂಕೇತ 1, 8, 22 ಮತ್ತು 36 ರ ವಿಷಯಗಳ (ಒಟ್ಟು ನಾಲ್ಕು ವಿಷಯಗಳು) ಪರೀಕ್ಷೆಗಳನ್ನು ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ನವದೆಹಲಿ ಮತ್ತು ಮಸ್ಸೂರಿ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುವುದು. ಸದರಿ ಪರೀಕ್ಷಾ ಕೇಂದ್ರಗಳು ಮತ್ತು ಅವುಗಳ ಸಂಕೇತ ಸಂಖ್ಯೆಗಳು ಈ ಕೆಳಗಿನ ಪಟ್ಟಿಯಂತಿವೆ:-**

| ಜಿಲ್ಲೆ | ಜಿಲ್ಲಾ ಸಂಕೇತ | ಜಿಲ್ಲೆ | ಜಿಲ್ಲಾ ಸಂಕೇತ | ಜಿಲ್ಲೆ | ಜಿಲ್ಲಾ ಸಂಕೇತ |
|---|---|---|---|---|---|
| ಬೆಂಗಳೂರು | 01 | ದಾವಣಗೆರೆ | 12 | ಮೈಸೂರು | 23 |
| ಬೆಳಗಾವಿ | 02 | ಕಲಬುರಗಿ | 13 | ರಾಮನಗರ | 24 |
| ಬಳ್ಳಾರಿ | 03 | ಗದಗ | 14 | ರಾಯಚೂರು | 25 |
| ಬೀದರ್ | 04 | ಹಾಸನ | 15 | ಶಿವಮೊಗ್ಗ | 26 |
| ವಿಜಯಪುರ | 05 | ಹಾವೇರಿ | 16 | ತುಮಕೂರು | 27 |
| ಬಾಗಲಕೋಟೆ | 06 | ಕಾರವಾರ | 17 | ಉಡುಪಿ | 28 |
| ಚಾಮರಾಜನಗರ | 07 | ಕೋಲಾರ | 18 | ನವದೆಹಲಿ | 29 |
| ಚಿಕ್ಕಬಳ್ಳಾಪುರ | 08 | ಕೊಪ್ಪಳ | 19 | ಮಸ್ಸೂರಿ | 30 |
| ಚಿಕ್ಕಮಗಳೂರು | 09 | ಮಂಡ್ಯ | 20 | ಯಾದಗಿರಿ | 31 |
| ಚಿತ್ರದುರ್ಗ | 10 | ಮಂಗಳೂರು | 21 | | |
| ಧಾರವಾಡ | 11 | ಮಡಿಕೇರಿ | 22 | | |

**ಆ) ದ್ವಿತೀಯ ಹಂತದ ಪರೀಕ್ಷೆಗಳು:- ವಿಷಯ ಸಂಕೇತ 2 ರಿಂದ 49 ರವರೆಗಿನ ಮತ್ತು 74ರ (01, 8, 22, ಮತ್ತು 36ರ ವಿಷಯಗಳನ್ನು ಹೊರತುಪಡಿಸಿ) ವಿಷಯಗಳ (ಒಟ್ಟು 46 ವಿಷಯಗಳು) ಪರೀಕ್ಷೆಗಳನ್ನು ಬೆಂಗಳೂರು, ಬೆಳಗಾವಿ, ಕಲಬುರಗಿ, ಮೈಸೂರು, ಶಿವಮೊಗ್ಗ, ನವದೆಹಲಿ ಮತ್ತು ಮಸ್ಸೂರಿ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುತ್ತಿದ್ದು, ಅವಲಂಬಿತ ಜಿಲ್ಲೆಗಳ ವಿವರಗಳು ಕೆಳಗಿನಂತಿವೆ:-**

--12

| ಪರೀಕ್ಷಾ ಕೇಂದ್ರಗಳು | ಅವಲಂಬಿತ ಜಿಲ್ಲೆಗಳು |
|---|---|
| ಬೆಂಗಳೂರು | ಬೆಂಗಳೂರು, ರಾಮನಗರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ. |
| ಮೈಸೂರು | ಮೈಸೂರು, ಮಂಡ್ಯ, ಮಡಿಕೇರಿ, ಚಾಮರಾಜನಗರ, ಹಾಸನ. |
| ಶಿವಮೊಗ್ಗ | ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಮಂಗಳೂರು, ಉಡುಪಿ. |
| ಬೆಳಗಾವಿ | ಬೆಳಗಾವಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಗದಗ, ಕಾರವಾರ, ಹಾವೇರಿ. |
| ಕಲಬುರಗಿ | ಕಲಬುರಗಿ, ಬೀದರ್, ಬಳ್ಳಾರಿ, ಕೊಪ್ಪಳ, ರಾಯಚೂರು, ಯಾದಗಿರಿ. |
| ನವದೆಹಲಿ | ನವದೆಹಲಿ |
| ಮಸ್ಸೂರಿ | ಮಸ್ಸೂರಿ |

ಇ) **ತೃತೀಯ ಹಾಗೂ ಅಂತಿಮ ಹಂತದ ಪರೀಕ್ಷೆಗಳು:– ವಿಷಯ ಸಂಕೇತ 51 ರಿಂದ 56, 58, 61 ರಿಂದ 68 ಮತ್ತು 70 ರಿಂದ 72 ವಿಷಯಗಳ (ಒಟ್ಟು 18 ವಿಷಯಗಳ) ಪರೀಕ್ಷೆಗಳನ್ನು ಬೆಂಗಳೂರು ಮತ್ತು ನವದೆಹಲಿ ಹಾಗೂ ಮಸ್ಸೂರಿ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು.**

ಈ) ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 69 ಎಸ್‌ಎಸ್‌ಆರ್ 76, ದಿನಾಂಕ 16ನೇ ಜುಲೈ 1977ರ ಅನುಸಾರವಾಗಿ ನವದೆಹಲಿಯ ಕರ್ನಾಟಕ ಭವನದಲ್ಲಿ ಕೆಲಸ ಮಾಡುತ್ತಿರುವ ಕರ್ನಾಟಕ ರಾಜ್ಯ ಸರ್ಕಾರಿ ಸೇವಾ ನೌಕರರಿಗೆ ಇಲಾಖಾ ಪರೀಕ್ಷೆಗಳನ್ನು ಆಯೋಗದಿಂದ "ಉಪನಿವಾಸಿ ಆಯುಕ್ತರು, ಕರ್ನಾಟಕ ಭವನದ ನಿವಾಸಿ ಆಯುಕ್ತರ ಕಛೇರಿ, ನವದೆಹಲಿ" ಇವರ ಮೇಲ್ವಿಚಾರಣೆಯಲ್ಲಿ ನಡೆಸಲಾಗುವುದು.

ಉ) ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 3 ಎಸ್‌ಎಸ್‌ಸಿ 83, ದಿನಾಂಕ 12ನೇ ಅಕ್ಟೋಬರ್ 1983, ಇದರ ಅನುಸಾರವಾಗಿ ಮಸ್ಸೂರಿಯಲ್ಲಿ ತರಬೇತಿ ಪಡೆಯುತ್ತಿರುವ ಕರ್ನಾಟಕ ರಾಜ್ಯದ ಐ.ಎ.ಎಸ್, ಐ.ಪಿ.ಎಸ್, ಮತ್ತು ಐ.ಎಫ್.ಎಸ್. ಪ್ರೊಬೇಷನರುಗಳಿಗೆ ಇಲಾಖಾ ಪರೀಕ್ಷೆಗಳನ್ನು ಆಯೋಗವು "ಪರೀಕ್ಷೆಗಳ ನಿಯಂತ್ರಣಾಧಿಕಾರಿ, ಲಾಲ್‌ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಪ್ರಕಾಶನ ಅಕಾಡೆಮಿ, ಮಸ್ಸೂರಿ" ಇವರ ಮೇಲ್ವಿಚಾರಣೆಯಲ್ಲಿ ನಡೆಸಲಾಗುವುದು

**20. ಪರೀಕ್ಷಾ ಕೇಂದ್ರದ ಆಯ್ಕೆ ಮತ್ತು ಬದಲಾವಣೆ ಮಾಡಿಕೊಳ್ಳುವ ವಿಧಾನಗಳು:–**

ಅ) ಪ್ರತಿಯೊಬ್ಬ ಅಭ್ಯರ್ಥಿಯು ಪ್ರಸಕ್ತ **ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲಾ ಕೇಂದ್ರವನ್ನೇ ಕಡ್ಡಾಯವಾಗಿ ಪರೀಕ್ಷಾ ಕೇಂದ್ರವನ್ನಾಗಿ ಆಯ್ಕೆ ಮಾಡಿಕೊಳ್ಳತಕ್ಕದ್ದು.** ಆದರೆ, ಯಾವುದೇ ಒಬ್ಬ ಅಭ್ಯರ್ಥಿಯು ಅರ್ಜಿ ಸಲ್ಲಿಸಿದ ನಂತರ ಇತರ ಜಿಲ್ಲೆಗೆ ವರ್ಗಾವಣೆಯಾದಲ್ಲಿ/ನಿಯೋಜನೆ/ಓಓಡಿ ಅಥವಾ ತನ್ನ ಕೇಂದ್ರ ಕಾರ್ಯಸ್ಥಾನದ ಹೊರಗೆ ಗಳಿಕೆ ರಜೆ/ಪರಿವರ್ತಿತ ರಜೆ/ ದೀರ್ಘಾವಧಿ ರಜೆಯ ಮೇಲಿರುವುದು ಮುಂತಾದ ನಿರ್ದಿಷ್ಟ, ವಿಶೇಷ ಕಾರಣಗಳಿದ್ದಲ್ಲಿ ಅಂತಹ ಅಭ್ಯರ್ಥಿಗಳು ಈ ಬಗ್ಗೆ ಲಿಖಿತ ರೂಪದಲ್ಲಿ ಆಯೋಗದ ಗಮನಕ್ಕೆ ತರತಕ್ಕದ್ದು ಹಾಗೂ ಸಂಬಂಧಿಸಿದ ಮಾಹಿತಿ/ದಾಖಲೆಗಳನ್ನು ಮನವಿಯೊಂದಿಗೆ ಒದಗಿಸತಕ್ಕದ್ದು. ಅಧಿಕೃತ ಕಾರಣಗಳ ಮೇಲೆ ಕೇಂದ್ರ ಬದಲಾವಣೆಗೆ ಅರ್ಜಿ ಸಲ್ಲಿಸುವ ನೌಕರರು ವರ್ಗಾವಣೆಯ ಅಥವಾ ಸ್ಥಳ ನಿಯುಕ್ತಿಯ/ದೀರ್ಘಾವಧಿ ರಜೆಯ ಆದೇಶಗಳ ದೃಢೀಕೃತ ನಕಲನ್ನು ಅಥವಾ ಸಂದರ್ಭಾನುಸಾರ ಯಾವುದೇ ಅಧಿಕೃತ ರಜೆ ಮಂಜೂರು ಮಾಡಲಾದ ಅಧಿಕೃತ ಜ್ಞಾಪನ ಪತ್ರದ ದೃಢೀಕೃತ ನಕಲಿನೊಂದಿಗೆ **ದಿನಾಂಕ:31–12–2018ರಂದು ಸಂಜೆ 5.00 ಗಂಟೆಯ ಒಳಗಾಗಿ ಆಯೋಗದ ಕಛೇರಿಯಲ್ಲಿ ಸ್ವೀಕೃತವಾಗುವಂತೆ ಖುದ್ದಾಗಿ/ಅಂಚೆ ಮೂಲಕ ಮನವಿಯನ್ನು ಸಲ್ಲಿಸತಕ್ಕದ್ದು. ಆ ನಂತರ ಸ್ವೀಕೃತವಾಗುವ ಮನವಿಗಳನ್ನು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವಿಲ್ಲದೆ ತಿರಸ್ಕರಿಸಲಾಗುವುದು.**

ಆ) ಕೇಂದ್ರ ಬದಲಾವಣೆಗೆ ಅನುಮತಿಸುವುದು/ನಿರಾಕರಿಸುವುದು ಆಯೋಗದ ವಿವೇಚನೆಗೆ ಒಳಪಟ್ಟಿದೆ. ಆದಾಗ್ಯೂ ಆಯೋಗದ ನಿರ್ದಿಷ್ಟ ಅನುಮತಿ ಇಲ್ಲದೆ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಕೇಂದ್ರವನ್ನು ಬಿಟ್ಟು ಬೇರೆ ಜಿಲ್ಲಾ ಕೇಂದ್ರದಲ್ಲಿ ಪರೀಕ್ಷೆಯನ್ನು ತೆಗೆದುಕೊಳ್ಳುವಂತಿಲ್ಲ. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು.

--13

**21. ವಿನಾಯಿತಿಯ ವಿವರ ಹಾಗೂ ಈ ವಿವರಗಳನ್ನು ಅರ್ಜಿಗಳಲ್ಲಿ ನಮೂದಿಸುವ ಬಗ್ಗೆ:–**

ನಿಯಮಾನುಸಾರ ಹಿಂದಿನ ವರ್ಷಗಳ/ಅಧಿವೇಶನಗಳ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳ ಮೇರೆಗೆ ಹಾಗೂ ಅಭ್ಯರ್ಥಿಗಳು ಹೊಂದಿರುವ ಶೈಕ್ಷಣಿಕ ವಿದ್ಯಾರ್ಹತೆ ಮೇರೆಗೆ ಕೆಲವು ವಿಷಯಗಳಿಗೆ/ಪತ್ರಿಕೆಗಳಿಗೆ ಈ ಕೆಳಗಿನಂತೆ ವಿನಾಯಿತಿಯನ್ನು ನೀಡಲಾಗುವುದು.

**(1) ಹಿಂದಿನ ಅಧಿವೇಶನಗಳ ಇಲಾಖಾ ಪರೀಕ್ಷೆಗಳಲ್ಲಿ ಕೆಲವು ವಿಷಯಗಳ/ಪತ್ರಿಕೆಗಳಲ್ಲಿ ಪಡೆದ ವಿನಾಯಿತಿ:**

ಅ) ಯಾವುದೇ ವಿಷಯದ ಪರೀಕ್ಷೆಯು ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನೊಳಗೊಂಡಿದ್ದು, ಅಭ್ಯರ್ಥಿಯು ಅದೇ ವಿಷಯದ ಯಾವುದಾದರೂ ಪತ್ರಿಕೆ/ಪತ್ರಿಕೆಗಳಲ್ಲಿ ಆ ಪತ್ರಿಕೆಗೆ ನಿರ್ದಿಷ್ಟಪಡಿಸಲಾದ ಗರಿಷ್ಟ ಅಂಕಗಳಲ್ಲಿ ಶೇಕಡಾ 60ಕ್ಕಿಂತ ಕಡಿಮೆ ಇರದಷ್ಟು ಅಂಕಗಳನ್ನು ಗಳಿಸಿದಲ್ಲಿ ಅಂತಹ ಅಭ್ಯರ್ಥಿಗಳನ್ನು ಆ ಪತ್ರಿಕೆಗಳಿಗೆ ವಿನಾಯಿತಿ ಹೊಂದಿರುವರೆಂದು ಪರಿಗಣಿಸಲಾಗುವುದು. ಅಂತಹ ಅಭ್ಯರ್ಥಿಗಳು ಕರ್ನಾಟಕ ಲೋಕಸೇವಾ ಆಯೋಗ(ಸೇವಾ ಪರೀಕ್ಷೆಗಳ ನಡೆಸುವಿಕೆ) ನಿಯಮಗಳು, 1965ರ ನಿಯಮ 9ರ ಉಪ ನಿಯಮ (3)ರಲ್ಲಿನಂತೆ ಪರೀಕ್ಷೆಗಳ ಫಲಿತಾಂಶ ಘೋಷಿಸಿದ ದಿನಾಂಕದಿಂದ ಎರಡು ವರ್ಷಗಳೊಳಗೆ ಆ ಪರೀಕ್ಷೆಯ ಉಳಿದ ಪತ್ರಿಕೆಯಲ್ಲಿ/ಗಳಲ್ಲಿ ತೇರ್ಗಡೆಯಾಗಲು ಅವಶ್ಯವಿರುವಷ್ಟು (ಶೇ.35ರಷ್ಟು) ಅಂಕಗಳನ್ನು ಪಡೆದು ತೇರ್ಗಡೆಯಾಗತಕ್ಕದ್ದು. ಇಲ್ಲದಿದ್ದಲ್ಲಿ ಅಂತಹ ವಿನಾಯಿತಿಯು ಎರಡು ವರ್ಷದ ನಂತರ ರದ್ದಾಗುವುದು. ನಿಯಮದ ಉದ್ಧೃತ ಭಾಗ ಕೆಳಕಂಡಂತಿದೆ:–

> "9(3) - Where an examination consists of more than one paper and a candidate secures in any paper not less than sixty percent of the maximum marks prescribed for that paper he shall be deemed to have passed the examination in that paper, if he passes the examination by securing the required number of passing marks in the other papers of the examination concerned within two years from the date of declaration of the result of the examination in which he had secured not less than sixty percent of the maximum marks in that paper."

ಆ) ಈ ರೀತಿ ಶೇಕಡ 60 ಹಾಗೂ ಅದಕ್ಕಿಂತಲೂ ಹೆಚ್ಚು ಅಂಕಗಳನ್ನು ಪಡೆದು ವಿನಾಯಿತಿ ಹೊಂದಿರುವಂತಹ ಅಭ್ಯರ್ಥಿಗಳು ಅವರು ವಿನಾಯಿತಿ ಪಡೆದ ವಿಷಯ, ವಿಷಯ ಸಂಕೇತ, ಪತ್ರಿಕೆ, ನೋಂದಣಿ ಸಂಖ್ಯೆ, ಅಧಿವೇಶನ/ವರ್ಷ ಮತ್ತು ಪರೀಕ್ಷಾ ಉಪಕೇಂದ್ರ ಇತ್ಯಾದಿ ವಿವರಗಳನ್ನು **ಆನ್‌ಲೈನ್ ಅರ್ಜಿಯಲ್ಲಿ ನಿಗದಿಪಡಿಸಿದ ಅಂಕಣದಲ್ಲಿ ನಿರ್ದಿಷ್ಟವಾಗಿ ನಮೂದಿಸಬೇಕು. ಈ ರೀತಿ ನಮೂದಿಸಿದಂತಹ ಅಭ್ಯರ್ಥಿಗಳು ವಿನಾಯಿತಿ ಹೊಂದಿದ ಪತ್ರಿಕೆಗೆ ಗೈರು ಹಾಜರಾಗತಕ್ಕದ್ದು, ಆ ವಿಷಯದ ಉಳಿದ ಪತ್ರಿಕೆಯಲ್ಲಿ/ಗಳಲ್ಲಿ ಕನಿಷ್ಠ ಉತ್ತೀರ್ಣತಾ ಅಂಕಗಳನ್ನು ಗಳಿಸಿದಲ್ಲಿ ಸದರಿ ವಿನಾಯಿತಿಯನ್ನು ಪ್ರಸಕ್ತ ಅಧಿವೇಶನದ ಫಲಿತಾಂಶ ಪ್ರಕಟಿಸುವಾಗ ಪರಿಗಣಿಸಲಾಗುವುದು.**

ಇ) ಅಭ್ಯರ್ಥಿಗಳು ಒಂದು ವೇಳೆ ಆನ್‌ಲೈನ್ ಅರ್ಜಿಯಲ್ಲಿ ವಿನಾಯಿತಿಯ ವಿವರಗಳನ್ನು ನಮೂದಿಸದಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಅವರು ವಿನಾಯಿತಿ ಪಡೆದ ವಿಷಯ, ವಿಷಯ ಸಂಕೇತ, ಪತ್ರಿಕೆ, ನೋಂದಣಿ ಸಂಖ್ಯೆ, ಅಧಿವೇಶನ/ವರ್ಷ ಮತ್ತು ಪರೀಕ್ಷಾ ಉಪಕೇಂದ್ರ ಇತ್ಯಾದಿ ವಿವರಗಳನ್ನು ಒಳಗೊಂಡ ಪ್ರತ್ಯೇಕ ಮನವಿಯನ್ನು ಪರೀಕ್ಷೆ ಮುಕ್ತಾಯದ ದಿನಾಂಕ:**20–12–2018** ರೊಳಗೆ ಸಲ್ಲಿಸಿದಲ್ಲಿ ಪ್ರಸಕ್ತ ಅಧಿವೇಶನದ ಫಲಿತಾಂಶ ಪ್ರಕಟಿಸುವ ಸಂದರ್ಭದಲ್ಲಿ ಪರಿಗಣಿಸಲು ಪರಿಶೀಲಿಸಲಾಗುವುದು.

ಈ) ಅಭ್ಯರ್ಥಿಗಳು ಒಂದು ವೇಳೆ ಆನ್‌ಲೈನ್ ಅರ್ಜಿಯಲ್ಲಿ ವಿನಾಯಿತಿಯ ವಿವರಗಳನ್ನು ನಮೂದಿಸದಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಅವರು ವಿನಾಯಿತಿ ಪಡೆದ ವಿಷಯ, ವಿಷಯ ಸಂಕೇತ, ಪತ್ರಿಕೆ, ನೋಂದಣಿ ಸಂಖ್ಯೆ, ಅಧಿವೇಶನ/ವರ್ಷ ಮತ್ತು ಪರೀಕ್ಷಾ ಉಪಕೇಂದ್ರ ಇತ್ಯಾದಿ ವಿವರಗಳನ್ನು ಒಳಗೊಂಡ ಪ್ರತ್ಯೇಕ ಮನವಿಯನ್ನು ಪರೀಕ್ಷೆ ಮುಕ್ತಾಯದ ದಿನಾಂಕ:**20-12-2018** ರ ನಂತರ ಸಲ್ಲಿಸಿದಲ್ಲಿ ಪ್ರಸಕ್ತ ಅಧಿವೇಶನದ ಫಲಿತಾಂಶ ಪ್ರಕಟಿಸುವ ಸಂದರ್ಭದಲ್ಲಿ ಪರಿಗಣಿಸಲು ಪರಿಶೀಲಿಸಲಾಗುವುದು ಅಥವಾ ಪ್ರತ್ಯೇಕವಾಗಿ ತಿದ್ದುಪಡಿ ಫಲಿತಾಂಶ ಪ್ರಕಟಿಸುವ ಬಗ್ಗೆ ಪರಿಶೀಲಿಸಲಾಗುವುದು.

ಉ) ಹಿಂದಿನ ಅಧಿವೇಶನದ ಪರೀಕ್ಷೆಗಳಲ್ಲಿ ಕನ್ನಡ ಭಾಷಾ ವಿಷಯದ (ವಿಷಯ ಸಂಕೇತ–47 ಅಥವಾ 72) ಪತ್ರಿಕೆ–1 ಮತ್ತು ಪತ್ರಿಕೆ–2ರ ಲಿಖಿತ ಪರೀಕ್ಷೆಯಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿ ವಿನಾಯಿತಿ ಪಡೆದಿದ್ದಲ್ಲಿ ಮೌಖಿಕ ಸಂದರ್ಶನಕ್ಕೆ ಹಾಜರಾಗಲು, ಕಡ್ಡಾಯವಾಗಿ ಅಭ್ಯರ್ಥಿಗೆ ಅನ್ವಯಿಸುವ ವಿಷಯ ಸಂಕೇತ 47 ಅಥವಾ 72 ಸಂಕೇತ ನಮೂದಿಸಿ ಅರ್ಜಿ ಸಲ್ಲಿಸಿ ಎರಡೂ ಪತ್ರಿಕೆಗಳಿಗೆ ವಿನಾಯತಿ ಹೊಂದಿರುವ ವಿವರಗಳನ್ನು ನಮೂದಿಸಬೇಕು ಪರೀಕ್ಷೆಯಲ್ಲಿ ಈ ಎರಡೂ

--14

ಪತ್ರಿಕೆಗಳಿಗೆ ಗೈರು ಹಾಜರಾದಲ್ಲಿ ಈ ಎರಡೂ ಪತ್ರಿಕೆಗಳ ವಿನಾಯಿತಿಯನ್ನು ಪರಿಗಣಿಸಿ ಮೌಖಿಕ ಸಂದರ್ಶನಕ್ಕೆ ಅರ್ಹತೆ ನೀಡಲಾಗುತ್ತದೆ. ವಿಷಯ ಸಂಕೇತ–47 ಅಥವಾ 72ರಲ್ಲಿ ವಿನಾಯಿತಿ ಪಡೆದಿರುವಂತಹ ಅಭ್ಯರ್ಥಿಗಳು ಯಾವುದೇ ಕಾರಣಕ್ಕೂ ವಿಷಯ ಸಂಕೇತ–73 ವಿಷಯವನ್ನು ಆಯ್ಕೆ ಮಾಡಿಕೊಳ್ಳಬಾರದು ವಿನಾಯಿತಿ ಪಡೆದ ಬಗ್ಗೆ ವಿವರಗಳನ್ನು ಆನ್‌ಲೈನ್ ಅರ್ಜಿಯ ಸಂಬಂಧಿಸಿದ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸಬೇಕು ಹಾಗೂ ನಿಗದಿತ **ಪರೀಕ್ಷಾ ಶುಲ್ಕ ₹100/-**ಗಳನ್ನು ಮತ್ತು ಪ್ರಮಾಣ ಪತ್ರ ಶುಲ್ಕ ₹30/-ಗಳನ್ನು ಪಾವತಿಸಬೇಕು.

**(2) ವಿದ್ಯಾರ್ಹತೆಗೆ ಸಂಬಂಧಪಟ್ಟಂತೆ ನೀಡಲಾಗುವ ವಿನಾಯಿತಿ: (Exemptions Regarding Qualifications):-**

ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಎಲ್.ಎಲ್.ಬಿ. ಅಥವಾ ಬಿ.ಎಲ್., ಹಾಗೂ ಬಿ.ಕಾಂ/ಬಿ.ಬಿ.ಎಂ/ ಐ.ಕಾಂ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪದವಿ ಹೊಂದಿದವರು ಕೆಳಕಂಡ ವಿಷಯದ ಕೆಲವು ಪತ್ರಿಕೆಗಳಲ್ಲಿ ವಿನಾಯಿತಿ ಕೋರಬಹುದು.

| Sl. No. | Degree/Diploma | Exemption in Subject and Paper |
|---|---|---|
| 1 | L. L. B / B. L | General Law Part-I Paper-1 |
| 2 | Candidates who are Law Graduates of any recognised University are exempted from passing part II.<br>**ಸೂಚನೆ:–** ಕಾನೂನು ಪದವಿಯನ್ನು ಪಡೆದ ಅಭ್ಯರ್ಥಿಗಳು ತಮ್ಮ ಪದವಿಯ ಅಂಕಪಟ್ಟಿ ಮತ್ತು ಘಟಿಕೋತ್ಸವ ಪ್ರಮಾಣಪತ್ರವನ್ನು ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆಯ ಮುಖ್ಯಸ್ಥರಿಗೆ ಸಲ್ಲಿಸಿ ಜನರಲ್ ಲಾ ಭಾಗ–2ರ ವಿಷಯದ ಇಲಾಖಾ ಪರೀಕ್ಷೆಯಿಂದ ವಿನಾಯಿತಿಯನ್ನು ಪಡೆದುಕೊಳ್ಳತಕ್ಕದ್ದು. ಕಾನೂನು ಪದವಿಯನ್ನು ಪಡೆದ ಅಭ್ಯರ್ಥಿಗಳು ಜನರಲ್ ಲಾ ಭಾಗ–2ರ ವಿಷಯದ ಪರೀಕ್ಷೆಗಾಗಿ ಆಯೋಗಕ್ಕೆ ಅರ್ಜಿ ಸಲ್ಲಿಸುವ ಅಗತ್ಯತೆ ಇಲ್ಲ. | General Law Part-II |
| 3 | Candidates who have passed B.Com. degree of I.Com. examination of any recognised University or its equivalent with ``Advanced Accountancy'' as one of the subjects of the Study, the Karnataka Accounts Entrance for the Karnataka Government Technical Examination in Book-Keeping of the Senior Grade or the G.D.A. Examination of the Bombay University +[or Diploma in Secretariat Practice examination conducted by the Board of Technical Education, Government of Karnataka.]<br>**ಸೂಚನೆ:–** ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 02 ಸೆಸೆನಿ 2001, ದಿನಾಂಕ:30/03/2001ರ ಅನ್ವಯ ಬಿ.ಕಾಂ. ಕೋರ್ಸಿನಲ್ಲಿ Financial Accountancy ವಿಷಯದಲ್ಲಿ ಪಾಸಾದವರನ್ನು Advanced Accountancy ವಿಷಯಕ್ಕೆ ಸಮಾನವಾಗಿದೆ ಎಂದು ಪರಿಗಣಿಸಿದೆ. | Co-Operation Paper-2 |
| 4 | Candidates who have passed B.Com. Degrre of I.Com. Examination of any recognised University or its equivalent with ``Advanced Accountancy'' as one of the subjects of the Study or the Karnataka Accounts Entrance of Karnataka Government Technical Examination in Book-Keeping of the Senior Grade or G.D.A. Examination of the Bombay University, are exempted from answering the paper in ``Book-Keeping'' and ``Accountancy''.<br>**ಸೂಚನೆ:–** ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 02 ಸೆಸೆನಿ 2001, ದಿನಾಂಕ:30/03/2001ರ ಅನ್ವಯ ಬಿ.ಕಾಂ. ಕೋರ್ಸಿನಲ್ಲಿ Financial Accountancy ವಿಷಯದಲ್ಲಿ ಪಾಸಾದವರನ್ನು Advanced Accountancy ವಿಷಯಕ್ಕೆ ಸಮಾನವಾಗಿದೆ ಎಂದು ಪರಿಗಣಿಸಿದೆ. | Commercial Tax Higher Part-I Paper-3 |

––15

| | | |
|---|---|---|
| 5 | Government servants who are Commerce Graduates of any recognised University with ``Advanced Accountancy'' as one of the subjects, for the degree course, are exempted from answering paper I of part III of SAS Examination.<br>**ಸೂಚನೆ:–** ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 02 ಸೆಸೆನಿ 2001, ದಿನಾಂಕ:30/03/2001ರ ಅನ್ವಯ ಬಿ.ಕಾಂ. ಕೋರ್ಸಿನಲ್ಲಿ Financial Accountancy ವಿಷಯದಲ್ಲಿ ಪಾಸಾದವರನ್ನು Advanced Accountancy ವಿಷಯಕ್ಕೆ ಸಮಾನವಾಗಿದೆ ಎಂದು ಪರಿಗಣಿಸಿದೆ. | S.A.S. Part-3, Paper-1 |
| 6 | Government servants who is a Commerce Graduate of a recognised University with ``Advanced Accountancy'' as one of the subjects, in degree course, are exempted from answering paper I of part II Treasury Accounts Examination.<br>**ಸೂಚನೆ:–** ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 02 ಸೆಸೆನಿ 2001, ದಿನಾಂಕ:30/03/2001ರ ಅನ್ವಯ ಬಿ.ಕಾಂ. ಕೋರ್ಸಿನಲ್ಲಿ Financial Accountancy ವಿಷಯದಲ್ಲಿ ಪಾಸಾದವರನ್ನು Advanced Accountancy ವಿಷಯಕ್ಕೆ ಸಮಾನವಾಗಿದೆ ಎಂದು ಪರಿಗಣಿಸಿದೆ. | Treasury Accounts Part-II Paper-1 |
| 7 | Candidates who have passed B.Com. Examination B.B.M. or equivalent degree examination of any recognised University with Advance Accountancy as one of the subjects of study are exempted from answering the paper on Book-Keeping and Accountancy.<br>**ಸೂಚನೆ:–** ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 02 ಸೆಸೆನಿ 2001, ದಿನಾಂಕ:30/03/2001ರ ಅನ್ವಯ ಬಿ.ಕಾಂ. ಕೋರ್ಸಿನಲ್ಲಿ Financial Accountancy ವಿಷಯದಲ್ಲಿ ಪಾಸಾದವರನ್ನು Advanced Accountancy ವಿಷಯಕ್ಕೆ ಸಮಾನವಾಗಿದೆ ಎಂದು ಪರಿಗಣಿಸಿದೆ. | Co-Operative Audit Examination Paper-2 |

ಅ) ಮೇಲ್ಕಂಡ ವಿದ್ಯಾರ್ಹತೆಗೆ ಸಂಬಂಧಿಸಿದ ವಿನಾಯಿತಿ ವಿವರಗಳನ್ನು ಆನ್‌ಲೈನ್ ಅರ್ಜಿಯಲ್ಲಿನ ಸಂಬಂಧಿಸಿದ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು ಹಾಗೂ ವಿನಾಯಿತಿ ಕೋರಿರುವ ಅಭ್ಯರ್ಥಿಗಳು ತತ್ಸಂಬಂಧದ ವಿಷಯಗಳನ್ನು ಅಭ್ಯಸಿಸಿರುವ ಬಗ್ಗೆ ಈ ಕೆಳಕಂಡ ಮೂರು ದಾಖಲೆಗಳನ್ನು **ಮೇಲಧಿಕಾರಿಗಳಿಂದ ದೃಢೀಕರಿಸಿ** ಮನವಿಯೊಂದಿಗೆ ದಿನಾಂಕ:**20–12–2018**ರ ಸಂಜೆ 5:00 ಗಂಟೆಯೊಳಗೆ ಆಯೋಗದ ಕಛೇರಿಯಲ್ಲಿ ಸ್ವೀಕೃತವಾಗುವಂತೆ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸತಕ್ಕದ್ದು.

1) ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಪ್ರತಿ.
2) ಪದವಿಯ ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅಂಕಪಟ್ಟಿಗಳು.
3) ಪದವಿಯ ತಾತ್ಕಾಲಿಕ ಉತ್ತೀರ್ಣತಾ ಪ್ರಮಾಣಪತ್ರ (Provisional Degree Certificate) ಅಥವಾ ಘಟಿಕೋತ್ಸವ ಪ್ರಮಾಣಪತ್ರ.

ಆ) **ಸಂಬಂಧಿತ ವಿಷಯಗಳನ್ನು ಅಭ್ಯಸಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಪದವಿಯ ಮೂರು/ಐದು ವರ್ಷದ ಅಥವಾ ಎಲ್ಲಾ ಸೆಮಿಸ್ಟರ್‌ಗಳ ಅಂಕಪಟ್ಟಿಗಳು ಆಯೋಗಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕು, ಪದವಿಯ ಯಾವುದಾದರೂ ಒಂದು ವರ್ಷದ/ಯಾವುದಾದರೂ ಸೆಮಿಸ್ಟರ್‌ಗಳ ಅಥವಾ ಅಪೂರ್ಣ ಅಂಕಪಟ್ಟಿಗಳನ್ನು ಸಲ್ಲಿಸಿದಲ್ಲಿ ಅಂತಹವುಗಳನ್ನು ಪರಿಗಣಿಸಲಾಗುವುದಿಲ್ಲ. ಈ ಎಲ್ಲ ದಾಖಲೆಗಳನ್ನು ದಿನಾಂಕ:20–12–2018ರ ಸಂಜೆ 5:00 ಗಂಟೆಯೊಳಗೆ ಆಯೋಗದ ಕಛೇರಿಯಲ್ಲಿ ಸ್ವೀಕೃತವಾಗುವಂತೆ ಸಲ್ಲಿಸಿದಲ್ಲಿ, ಪರಿಶೀಲಿಸಿದ ನಂತರ ಕ್ರಮಬದ್ಧವಾಗಿದ್ದಲ್ಲಿ, ಪ್ರಸಕ್ತ ಅಧಿವೇಶನದ ಫಲಿತಾಂಶ ಪ್ರಕಟಿಸುವ ಸಂದರ್ಭದಲ್ಲಿ ಸದರಿ ವಿನಾಯಿತಿಯನ್ನು ಪರಿಗಣಿಸಲು ಪರಿಶೀಲಿಸಲಾಗುವುದು. ಪದವಿಯ ಎಲ್ಲಾ ವರ್ಷಗಳ/ ಎಲ್ಲಾ ಸೆಮಿಸ್ಟರ್‌ಗಳ ಅಂಕಪಟ್ಟಿಗಳನ್ನು ಸಲ್ಲಿಸದಿದ್ದಲ್ಲಿ ಅಭ್ಯರ್ಥಿಯೊಂದಿಗೆ ಯಾವುದೇ ಪತ್ರ ವ್ಯವಹಾರ ಮಾಡದೇ ವಿನಾಯಿತಿ ಕೋರಿಕೆಯನ್ನು ತಿರಸ್ಕರಿಸಲಾಗುವುದು.**

--16

ಇ) ಆನ್‌ಲೈನ್ ಅರ್ಜಿಯಲ್ಲಿನ ವಿನಾಯಿತಿಗೆ ಸಂಬಂಧಿಸಿದ ಅಂಕಣದಲ್ಲಿ ಅಭ್ಯರ್ಥಿಯು ಪಡೆದಿರುವ ಪದವಿಯ ಬಗ್ಗೆ ನಮೂದಿಸಿ ಮೇಲೆ ನಮೂದಿಸಿರುವ ದಾಖಲೆಗಳನ್ನು **ಮೇಲಧಿಕಾರಿಗಳಿಂದ ದೃಢೀಕರಿಸಿ** ಮನವಿಯೊಂದಿಗೆ ದಿನಾಂಕ:**20–12–2018**ರ ನಂತರ ಆಯೋಗಕ್ಕೆ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಿದಲ್ಲಿ ಪ್ರಸಕ್ತ ಅಧಿವೇಶನದ ಫಲಿತಾಂಶ ಪ್ರಕಟಿಸುವ ಸಂದರ್ಭದಲ್ಲಿ ಪರಿಗಣಿಸಲು ಪರಿಶೀಲಿಸಲಾಗುವುದು ಅಥವಾ ಪ್ರತ್ಯೇಕವಾಗಿ ತಿದ್ದುಪಡಿ ಆದೇಶ ಜಾರಿ ಮಾಡುವ ಮೂಲಕ ಫಲಿತಾಂಶ ಪ್ರಕಟಿಸುವ ಬಗ್ಗೆ ಪರಿಶೀಲಿಸಲಾಗುವುದು.

ಈ) ಆನ್‌ಲೈನ್ ಅರ್ಜಿಯಲ್ಲಿನ ವಿನಾಯಿತಿಗೆ ಸಂಬಂಧಿಸಿದ ಅಂಕಣದಲ್ಲಿ ಅಭ್ಯರ್ಥಿಯು ಪಡೆದಿರುವ ಪದವಿಯ ಬಗ್ಗೆ ನಮೂದು ಮಾಡದೆ/ವಿನಾಯಿತಿ ಕ್ಲೇಮು ಮಾಡದೆ ಮೇಲೆ ನಮೂದಿಸಿರುವ ದಾಖಲೆಗಳನ್ನು **ಮೇಲಧಿಕಾರಿಗಳಿಂದ ದೃಢೀಕರಿಸಿ** ದಿ:**20–12–2018** ರೊಳಗಾಗಿ ಮನವಿಯೊಂದಿಗೆ ಆಯೋಗಕ್ಕೆ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಿದಲ್ಲಿ ಪ್ರಸಕ್ತ ಅಧಿವೇಶನದ ಫಲಿತಾಂಶ ಪ್ರಕಟಿಸುವ ಸಂದರ್ಭದಲ್ಲಿ ಪರಿಗಣಿಸಲು ಪರಿಶೀಲಿಸಲಾಗುವುದು ಅಥವಾ ಪ್ರತ್ಯೇಕವಾಗಿ ತಿದ್ದುಪಡಿ ಆದೇಶ ಜಾರಿ ಮಾಡುವ ಮೂಲಕ ಫಲಿತಾಂಶ ಪ್ರಕಟಿಸುವ ಬಗ್ಗೆ ಪರಿಶೀಲಿಸಲಾಗುವುದು.

**(3) ಇತರೆ ವಿನಾಯಿತಿ: ( Other Exemptions):**

ಕೆಲವು ವಿಷಯಗಳ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಈ ಕೆಳಕಂಡ ವಿಷಯಗಳಿಗೆ ವಿನಾಯಿತಿ ಇರುತ್ತದೆ.

| Sl. No. | Subject to be Passed | Exemption in Subject |
|---|---|---|
| 1 | Candidates who have passed the Municipal and Local Boards Examination or Part I of the Block Development Officers and Deputy Block Development Officers Examination are exempted from passing part I of Community Development Examination. | Community Development Part-I |
| 2 | Candidates who have passed part II of the Block Development Officers and Deputy Block Development Officers Examination are exempted from passing Community Development Examination part II. | Community Development Part-II |
| 3 | Officials who have passed Secretariat Manual Part-I Examination are exempted from passing Karnataka Public Service Commission Manual Examination. | K.P.S.C. Manual |
| 4 | Candidates who have passed SAS (All parts) Examination are exempted from appearing for Accounts Higher, Accounts Lower and Local Laws and Commercial Book Keeping Examination. | Accounts Lower, Accounts Higher and Local Laws and Commercial Book Keeping |
| 5 | Candidates who have passed Treasury Accounts examination (All parts) are exempted from passing Accounts Higher Examination. | Accounts Higher |
| 6 | Accounts Higher | Accounts Lower (ಸರ್ಕಾರದ ಸುತ್ತೋಲೆ ಸಂಖ್ಯೆ:GAD 25 SSR 76, ದಿನಾಂಕ:01/04/1976ರ ಅನ್ವಯ) |
| 7 | Revenue Higher | Revenue Lower (ಸರ್ಕಾರದ ಸುತ್ತೋಲೆ ಸಂಖ್ಯೆ:GAD 25 SSR 76, ದಿನಾಂಕ:01/04/1976ರ ಅನ್ವಯ) |

ಅ. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 06 ಎಸ್‌ಎಸ್‌ಆರ್ 76, ದಿನಾಂಕ 10ನೇ ಜನವರಿ 1977ರ ಅನುಸಾರವಾಗಿ ಸರ್ಕಾರಿ ಆದೇಶ ಸಂಖ್ಯೆ: ಎಎಫ್‌ಡಿ 649 ಇಎನ್‌ಟಿ 57, ದಿನಾಂಕ 23ನೇ/25ನೇ ಫೆಬ್ರವರಿ 1959ರ ಅನುಸಾರವಾಗಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಿಂದ ನಡೆಸಲಾದ ಅರಣ್ಯ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಫಾರೆಸ್ಟ್ ಪರೀಕ್ಷೆಯ **ಪತ್ರಿಕೆ–2 ರಲ್ಲಿ ತೇರ್ಗಡೆಯಾಗುವುದರಿಂದ ವಿನಾಯಿತಿ ನೀಡಲಾಗಿದೆ.**

**––17**

ಆ. ಸರ್ಕಾರದ ಅಧಿಸೂಚನೆ ಸಂಖ್ಯೆ. ಸಿಆಸುಇ 3 ಸೆಸೇನಿ 2010, ಬೆಂಗಳೂರು, ದಿನಾಂಕ: 02–02–2011 ರನ್ವಯ ಕರ್ನಾಟಕ ಸಿವಿಲ್ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು, 2006ರಲ್ಲಿ ನಿಗದಿಪಡಿಸಿರುವಂತೆ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇಮಕಾತಿಗೆ ಆಯ್ಕೆ ಪರೀಕ್ಷೆಯ ಒಂದು ಭಾಗವಾಗಿ ಲೋಕಸೇವಾ ಆಯೋಗ ಅಥವಾ ಇತರೆ ಯಾವುದೇ ಪ್ರಾಧಿಕಾರ ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ವಿಷಯದ ಇಲಾಖಾ ಪರೀಕ್ಷೆ ಬರೆಯುವುದರಿಂದ ಸಂಪೂರ್ಣ ವಿನಾಯಿತಿ ಇರುತ್ತದೆ.

ವಿನಾಯಿತಿ ಬಗೆಗಿನ ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಕರ್ನಾಟಕ ನಾಗರಿಕ ಸೇವೆಗಳು (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರ ಉಪನಿಯಮ 05ನ್ನು ಪರಿಶೀಲಿಸಲು ಸೂಚಿಸಿದೆ. ವಿವರಗಳನ್ನು ಇದೇ ಅಧಿಸೂಚನೆಯ ಕ್ರ.ಸಂ:**26ರ ಉಪಕ್ರಮಾಂಕ (4)**ರಲ್ಲಿ ವಿವರಿಸಿದೆ.

**22. ಅನುಲೇಖನ ಸಹಾಯ:–**

(1) ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 19 ಎಸ್‌ಎಸ್‌ಸಿ 75, ದಿನಾಂಕ 5ನೇ ಜುಲೈ 1978ರ ಅನುಸಾರವಾಗಿ ಅಂಧರಾಗಿರುವ ಅಥವಾ ತನ್ನ ಸ್ವಂತ ಕೈಯಿಂದ ಬರೆಯಲು ಅಸಮರ್ಥರಾದ ಅಭ್ಯರ್ಥಿಗಳಿಗೆ ಈ ಮುಂದಿನ ಷರತ್ತುಗಳಿಗೊಳಪಟ್ಟು ಆಯೋಗದ ಅನುಮತಿಯ ಮೇರೆಗೆ ಒಬ್ಬ ಅನುಲೇಖನ ಸಹಾಯವನ್ನು ಪಡೆಯುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.

ಅ) ಅನುಲೇಖನ ಸಹಾಯವನ್ನು ಬಯಸುವ ಅಭ್ಯರ್ಥಿಯು ಈ ಕೆಳಕಂಡ ಎರಡು ದಾಖಲೆಗಳನ್ನು ಮೇಲಧಿಕಾರಿಗಳಿಂದ ದೃಢೀಕರಿಸಿ ಮುಖಪತ್ರದೊಂದಿಗೆ ಮೇಲಧಿಕಾರಿಗಳ ಮೂಲಕ ಆಯೋಗಕ್ಕೆ ಕಳುಹಿಸತಕ್ಕದ್ದು.

1. ಆನ್ ಲೈನ್ ಅರ್ಜಿ ಪ್ರತಿ.
2. ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಜಾರಿ ಮಾಡಿರುವ ಅಂಧತ್ವದ ವೈದ್ಯಕೀಯ ಪ್ರಮಾಣ ಪತ್ರ. (ನಮೂನೆಯ ಮಾದರಿಯನ್ನು ಅಧಿಸೂಚನೆಗೆ ಅನುಬಂಧಿಸಲಾಗಿದೆ.)

ಆ) ಮೇಲಧಿಕಾರಿಯು ವೈದ್ಯಕೀಯ ಪ್ರಮಾಣಪತ್ರವನ್ನು ಆಯೋಗಕ್ಕೆ ಕಳುಹಿಸುವ ಮೊದಲು ಅಭ್ಯರ್ಥಿಯು ನಿಜವಾಗಿಯು ಅಸಮರ್ಥನಾಗಿರುವನೆ ಮತ್ತು ಅವನಿಗೆ/ಅವಳಿಗೆ ಅನುಲೇಖಕನ ಸಹಾಯ ಅವಶ್ಯವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ಮೇಲಾಧಿಕಾರಿಗಳು ಶಿಫಾರಸ್ಸು ಮಾಡತಕ್ಕದ್ದು.

**(2) ಅನುಲೇಖನ ಸಹಾಯ ಪಡೆಯುವ ಅಭ್ಯರ್ಥಿಗಳ ಬಗ್ಗೆ ಪರೀಕ್ಷಾ ಉಪ ಕೇಂದ್ರದ ಮೇಲ್ವಿಚಾರಕರು ಕೈಗೊಳ್ಳಬೇಕಾದ ಕ್ರಮ:–**

ಅ) ಆಯೋಗವು ಅನುಲೇಖನ ಸಹಾಯಕ್ಕೆ ಅನುಮತಿ ಪತ್ರ ನೀಡಿದ್ದಲ್ಲಿ ಮಾತ್ರ ಸಂಬಂಧಪಟ್ಟ ಉಪ ಪರೀಕ್ಷಾ ಕೇಂದ್ರದ ಮೇಲ್ವಿಚಾರಕರು ಅಭ್ಯರ್ಥಿಗೆ ಒಬ್ಬ ಅನುಲೇಖನ ಸಹಾಯಕನನ್ನು ನೇಮಕ ಮಾಡತಕ್ಕದ್ದು ಮತ್ತು ಅದನ್ನು ಆಯೋಗದ ಕಾರ್ಯದರ್ಶಿ ಅಥವಾ ಪರೀಕ್ಷಾ ನಿಯಂತ್ರಕರಿಗೆ ಪತ್ರ ಮುಖೇನ ತಿಳಿಸತಕ್ಕದ್ದು.

ಆ) ಹಾಗೆ ನೇಮಕ ಮಾಡಲಾದ ಅನುಲೇಖನ ಸಹಾಯಕನು ಅಭ್ಯರ್ಥಿಗಿಂತ ಕೆಳಗಿನ ದರ್ಜೆಯ ಹುದ್ದೆಯಲ್ಲಿರುವವರು ಮತ್ತು ಕಡಿಮೆ ಶಿಕ್ಷಣ ಪಡೆದವನು ಆಗಿರತಕ್ಕದ್ದು ಮತ್ತು ಅವನು ಅಭ್ಯರ್ಥಿಯ ಸಂಬಂಧಿಕನಾಗಿರಬಾರದು. ಈ ಸೂಚನೆಯನ್ನು ಉಲ್ಲಂಘಿಸಿದ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುತ್ತದೆ.

ಇ) ಅಭ್ಯರ್ಥಿಗಳು ಪರೀಕ್ಷೆಯ ಪ್ರತಿಯೊಂದು ಪತ್ರಿಕೆಗೆ **₹ 5/- (ಐದು ರೂಪಾಯಿಗಳು)** ಮೊತ್ತವನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು ಮತ್ತು ಸದರಿ ಮೊತ್ತವನ್ನು ಪರೀಕ್ಷೆಯ ಪತ್ರಿಕೆ ಮುಗಿದ ಕೂಡಲೇ ಅನುಲೇಖನ ಸಹಾಯಕನಿಗೆ ಸಂದಾಯ ಮಾಡತಕ್ಕದ್ದು.

ಈ) ಅನುಲೇಖನ ಸಹಾಯಕನನ್ನು ನೇಮಕ ಮಾಡಲಾಗಿದ್ದರೆ ಅಂತಹ ಅಭ್ಯರ್ಥಿಗೆ ಪರೀಕ್ಷೆ ಬರೆಯಲು ಪರೀಕ್ಷಾ ಅವಧಿಯ ನಂತರ ಹದಿನೈದು ನಿಮಿಷಗಳ ಹೆಚ್ಚಿನ ಕಾಲಾವಕಾಶವನ್ನು ನೀಡಲಾಗುವುದು.

(3) ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 115 ಸೆನೇನಿ 2005; ದಿನಾಂಕ: **19–11–2005**ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ವೈದ್ಯಕೀಯ ಪ್ರಮಾಣ ಪತ್ರ, ಮೇಲಧಿಕಾರಿಗಳ ದೃಢೀಕರಣ ಪತ್ರ ಮತ್ತು ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಲಗತ್ತಿಸಿ **ದಿನಾಂಕ:20–12–2018ರಂದು ಸಂಜೆ 5.00 ಗಂಟೆಯ ಒಳಗಾಗಿ ಆಯೋಗದ ಕಛೇರಿಯಲ್ಲಿ ಸ್ವೀಕೃತವಾಗುವಂತೆ ಮನವಿಯನ್ನು ಸಲ್ಲಿಸತಕ್ಕದ್ದು.** ಆ ನಂತರ ಖುದ್ದಾಗಿ ಅಥವಾ ಅಂಚೆ ಮೂಲಕ ಆಯೋಗದಲ್ಲಿ ಸ್ವೀಕೃತವಾಗುವ ಮನವಿಗಳನ್ನು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವಿಲ್ಲದೆ ತಿರಸ್ಕರಿಸಲಾಗುವುದು.

--18

**<u>ಸೂಚನೆ:–</u>** (ಅ) ಅಭ್ಯರ್ಥಿಗಳು ಅನುಲೇಖಕನ ಸಹಾಯ ಕೋರಿ ಸಲ್ಲಿಸುವ ವೈದ್ಯಕೀಯ ಪ್ರಮಾಣ ಪತ್ರವನ್ನು ಅನುಮಾನಾಸ್ಪದ ಸಂದರ್ಭದಲ್ಲಿ ವೈದ್ಯಕೀಯ ಮಂಡಳಿಗೆ ಪರಿಶೀಲನೆಗಾಗಿ ಕಳುಹಿಸಲಾಗುವುದು ಹಾಗೂ ಕೆಲವೊಂದು ಸಂದರ್ಭಗಳಲ್ಲಿ ಅವಶ್ಯಕವೆನಿಸಿದರೆ ಅಂತಹವರನ್ನು (ಅಭ್ಯರ್ಥಿಯನ್ನು) ವೈದ್ಯಕೀಯ ಪರಿಶೀಲನೆಗೂ ಗುರಿಪಡಿಸಲಾಗುವುದು. ಸುಳ್ಳು ಪ್ರಮಾಣಪತ್ರ ಹಾಜರುಪಡಿಸಿದ್ದು ಸಾಬೀತಾದ ಸಂದರ್ಭಗಳಲ್ಲಿ ಅಂತಹ ಅಭ್ಯರ್ಥಿಗಳ ಮೇಲೆ ಕಾನೂನಿನ್ವಯ ಶಿಸ್ತಿನ ಕ್ರಮ ಜರುಗಿಸಲಾಗುವುದಲ್ಲದೆ ಅಂತಹ ಅಭ್ಯರ್ಥಿಯ ಪ್ರಸಕ್ತ ಅಧಿವೇಶನದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

(ಆ) ಆಯೋಗದಿಂದ ಸೂಕ್ತ ಅನುಮತಿ ಪತ್ರವನ್ನು ಪಡೆಯದೆ ಯಾವುದೇ ಅಭ್ಯರ್ಥಿಯು ಅನುಲೇಖನ ಸಹಾಯವನ್ನು ಪಡೆದುಕೊಳ್ಳುವಂತಿಲ್ಲ. ಒಂದು ವೇಳೆ ಪಡೆದುಕೊಂಡಲ್ಲಿ ಅಂತಹ ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

**23. <u>ಪ್ರವೇಶ ಪತ್ರ:–</u>**

ಅ) **<u>ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುತ್ತಿರುವುದರಿಂದ ಪ್ರವೇಶಪತ್ರಗಳನ್ನು ಆಯೋಗದಿಂದ ಅಂಚೆ ಮೂಲಕ ಪ್ರತ್ಯೇಕವಾಗಿ ಕಳುಹಿಸಲಾಗುವುದಿಲ್ಲ.</u>**

ಆ) ಅರ್ಹ ಅಭ್ಯರ್ಥಿಗಳ ಪ್ರವೇಶಪತ್ರಗಳನ್ನು ಪರೀಕ್ಷೆಗೆ ಸಾಕಷ್ಟು ಮುಂಚಿತವಾಗಿ ಆಯೋಗದ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗುತ್ತದೆ. ಅಭ್ಯರ್ಥಿಗಳು ತಮ್ಮ ಅರ್ಜಿ ಸಂಖ್ಯೆ (**application ID)** ಮತ್ತು ಜನ್ಮ ದಿನಾಂಕದ ಮಾಹಿತಿಯನ್ನು ನಮೂದಿಸಿ ಪ್ರವೇಶಪತ್ರವನ್ನು **<u>Download</u>** ಮಾಡಿಕೊಳ್ಳತಕ್ಕದ್ದು. ಒಂದು ವೇಳೆ ಅಭ್ಯರ್ಥಿಗಳು ತಮ್ಮ ಬಳಿ ಅರ್ಜಿ ಸಂಖ್ಯೆಯ ಮಾಹಿತಿ/ದಾಖಲೆಯನ್ನು ಹೊಂದಿರದಿದ್ದಲ್ಲಿ ಅಭ್ಯರ್ಥಿಗಳು ಅರ್ಜಿ ಸಂಖ್ಯೆಯ ಮಾಹಿತಿಯನ್ನು ಪಡೆಯಬೇಕಾದಲ್ಲಿ ಆಯೋಗದ ವೆಬ್‌ಸೈಟ್‌ನ **HOME PAGE** ನಲ್ಲಿನ '**Search application ID**' ಲಿಂಕಿನಲ್ಲಿ ಮಾಹಿತಿಗಳನ್ನು ದಾಖಲಿಸಿ ಅರ್ಜಿ ಸಂಖ್ಯೆಯನ್ನು ಪಡೆಯಬಹುದಾಗಿರುತ್ತದೆ.

ಇ) ಪ್ರವೇಶ ಪತ್ರವನ್ನು ಅಭ್ಯರ್ಥಿಗಳು ಜೋಪಾನವಾಗಿಟ್ಟುಕೊಂಡಿರಬೇಕು ಮತ್ತು ಅವುಗಳನ್ನು ತಮ್ಮ ಸೇವಾ ದಾಖಲೆಗಳಲ್ಲಿ ನಮೂದು ಮಾಡುವುದಕ್ಕಾಗಿ ಆಯೋಗದಿಂದ ನೀಡಲಾದ ತೇರ್ಗಡೆ ಪ್ರಮಾಣ ಪತ್ರದೊಂದಿಗೆ ಸಕ್ಷಮ ಪ್ರಾಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು.

**ಈ)** **<u>ಯಾವುದೇ ಸಂದರ್ಭದಲ್ಲಿ ಪರೀಕ್ಷೆಗಳು ಮುಗಿದ ನಂತರ ಪ್ರವೇಶಪತ್ರದ ನಕಲನ್ನು ಆಯೋಗದಿಂದ ಜಾರಿ ಮಾಡಲಾಗುವುದಿಲ್ಲ.</u>** ನಕಲು ಪ್ರವೇಶಪತ್ರವನ್ನು ಆಯೋಗದಲ್ಲಿ ಸಂರಕ್ಷಿಸಿಡುವುದಿಲ್ಲವಾದ್ದರಿಂದ ಪ್ರವೇಶಪತ್ರವನ್ನು ತಮ್ಮ ಮಾಹಿತಿಗಾಗಿ ಜೋಪಾನವಾಗಿ ಇಟ್ಟುಕೊಳ್ಳತಕ್ಕದ್ದು.

**ಉ)** ಆಯೋಗದ ವೆಬ್‌ಸೈಟ್‌ನಿಂದ **Download** ಮಾಡಿಕೊಂಡ ಪ್ರವೇಶಪತ್ರದಲ್ಲಿ ಹೆಸರು, ಪದನಾಮ, ವಿಳಾಸ ಇತ್ಯಾದಿಗಳಲ್ಲಿ ಅಕ್ಷರ ದೋಷಗಳಿದ್ದಲ್ಲಿ (Spelling Mistakes) ಮಾತ್ರ ತಕ್ಷಣ ಅವುಗಳನ್ನು ತಿದ್ದುಪಡಿ ಮಾಡುವಂತೆ ಕೋರಿ ಪ್ರವೇಶಪತ್ರದ ಜೆರಾಕ್ಸ್ ಪ್ರತಿಯೊಂದಿಗೆ ತಿದ್ದುಪಡಿಗೆ ಅಗತ್ಯವಿರುವ ದಾಖಲೆ/ಮಾಹಿತಿಗಳನ್ನು ಮೇಲಧಿಕಾರಿಗಳಿಂದ ದೃಢೀಕರಿಸಿ ಆಯೋಗಕ್ಕೆ ಮನವಿಯನ್ನು ಸಲ್ಲಿಸಿದಲ್ಲಿ ಮಾತ್ರ ಪ್ರಮಾಣಪತ್ರವನ್ನು ಮುದ್ರಿಸುವ ಮುನ್ನ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಪ್ರಮಾಣಪತ್ರವನ್ನು ಒದಗಿಸಲಾಗುವುದು. **<u>ಪ್ರಮಾಣಪತ್ರವನ್ನು ಜಾರಿಮಾಡಿದ ನಂತರ ಇಂತಹ ತಿದ್ದುಪಡಿಗಾಗಿ ಸಲ್ಲಿಸುವ ಕೋರಿಕೆಗಳನ್ನು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವಿಲ್ಲದೆ ತಿರಸ್ಕರಿಸಲಾಗುವುದು.</u>**

**ಊ)** ಅಭ್ಯರ್ಥಿಯ ಹೆಸರಿನ ಬದಲಾವಣೆ, ಪದನಾಮ, ಕಛೇರಿ ವಿಳಾಸದ ಬದಲಾವಣೆ ಮಾಡುವುದಿಲ್ಲ. ಕಛೇರಿ ವಿಳಾಸವನ್ನು ಹೊರತುಪಡಿಸಿ ಮನೆ ವಿಳಾಸವನ್ನು ನಮೂದಿಸಬೇಕೆಂದು ಕೋರಿದಲ್ಲಿ ಅಂತಹ ಬದಲಾವಣೆಯನ್ನು ಮಾಡುವುದಿಲ್ಲ. ಪ್ರಮಾಣಪತ್ರದಲ್ಲಿ ಕಛೇರಿಯ ವಿಳಾಸವನ್ನು ಮಾತ್ರ ನಮೂದಿಸಬೇಕಿರುತ್ತದೆ. ಆದ್ದರಿಂದ ಮೇಲ್ಕಂಡ ಬದಲಾವಣೆಗಳನ್ನು ಕೋರಿ ಸಲ್ಲಿಸಿದ ಮನವಿಗಳನ್ನು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವಿಲ್ಲದೆ ತಿರಸ್ಕರಿಸಲಾಗುವುದು.

**24. <u>ಪಠ್ಯಪುಸ್ತಕಗಳು:–</u>**

ಅ) ಪಠ್ಯಪುಸ್ತಕಗಳನ್ನು ಉಪಯೋಗಿಸಿ ಪರೀಕ್ಷೆ ಬರೆಯಬಹುದಾದ ಪತ್ರಿಕೆಗಳಿಗೆ ಅಭ್ಯರ್ಥಿಗಳು ಸರ್ಕಾರದಿಂದ ಪ್ರಕಾಶಿಸಲ್ಪಟ್ಟ ಪಠ್ಯಪುಸ್ತಕಗಳನ್ನು ಮತ್ತು ಖಾಸಗಿ ಪ್ರಕಾಶಕರಿಂದ ಪ್ರಕಾಶಿಸಲ್ಪಟ್ಟ ಪುಸ್ತಕಗಳನ್ನು ಸರ್ಕಾರಿ ಪ್ರಕಾಶಿತ ಪುಸ್ತಕಗಳ ಮಾದರಿಗೆ ಯಾವುದೇ ರೀತಿಯ ತದ್ವಿರುದ್ಧವಾಗಿಲ್ಲದಿದ್ದರೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 3ನೇ ಡಿಸೆಂಬರ್ 1991ರ ಆದೇಶಕ್ಕೆ ಅನುಗುಣವಾಗಿದ್ದರೆ ಅಂತಹ ಪಠ್ಯ ಪುಸ್ತಕಗಳನ್ನು ಮಾತ್ರ ಪರೀಕ್ಷಾ ಕೇಂದ್ರಗಳಲ್ಲಿ ಉಪಯೋಗಿಸಬಹುದಾಗಿರುತ್ತದೆ. ಇತರೇ ಯಾವುದೇ ಖಾಸಗಿ ಪ್ರಕಾಶಕರು ಸಿದ್ಧಪಡಿಸಿದ ಗೈಡ್‌ಗಳನ್ನು ನಿಷೇಧಿಸಲಾಗಿದೆ.

––19

ಆ) ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ ಮತ್ತು ಲೋಯರ್ ವಿಷಯಗಳ ಪರೀಕ್ಷೆಯಲ್ಲಿ "ಉದ್ಯೋಗ ಮತ್ತು ತರಬೇತಿ ಮಹಾನಿರ್ದೇಶನಾಲಯ, ನವದೆಹಲಿ" ಇವರು ಪ್ರಕಟಿಸಿರುವ **"ಎಂಪ್ಲಾಯ್‌ಮೆಂಟ್ ಸರ್ವೀಸ್ ಮ್ಯಾನ್ಯುಯಲ್"** ಪುಸ್ತಕವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ.

**25. ಹಾಜರಿ ಪ್ರಮಾಣ ಪತ್ರಗಳು:–**

ಪರೀಕ್ಷೆಗೆ ಹಾಜರಾದ ಬಗ್ಗೆ ಹಾಜರಾತಿ ಪ್ರಮಾಣಪತ್ರ ಪಡೆಯಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪರೀಕ್ಷಾ ಉಪ ಕೇಂದ್ರದ ಮೇಲ್ವಿಚಾರಕರಿಂದ ಅದನ್ನು ಪರೀಕ್ಷಾ ದಿನದಂದೇ ಪಡೆಯತಕ್ಕದ್ದು. **ಹಾಜರಿ ಪ್ರಮಾಣಪತ್ರವನ್ನು ಆಯೋಗದ ಕಛೇರಿಯಿಂದ ಯಾವುದೇ ಸಂದರ್ಭದಲ್ಲೂ ಪ್ರತ್ಯೇಕವಾಗಿ ನೀಡಲಾಗುವುದಿಲ್ಲ.**

**26. ಕನ್ನಡ ಭಾಷಾ ಮೌಖಿಕ ಪರೀಕ್ಷೆ:–**

1) ಕನ್ನಡ ಭಾಷಾ ವಿಷಯದ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಮೌಖಿಕ ಪರೀಕ್ಷೆಯನ್ನು ಆಯೋಗದ ಕೇಂದ್ರ ಕಛೇರಿ, ಉದ್ಯೋಗ ಸೌಧ, ಬೆಂಗಳೂರು –560001, ಇಲ್ಲಿ ಹಾಗೂ ಆಯೋಗದ ಪ್ರಾಂತೀಯ ಕಛೇರಿಗಳಿರುವ ಬೆಳಗಾವಿ, ಕಲಬುರಗಿ, ಮೈಸೂರು ಮತ್ತು ಶಿವಮೊಗ್ಗ ಜಿಲ್ಲಾ ಕೇಂದ್ರಗಳಲ್ಲಿ ನಡೆಸಲಾಗುವುದು. ಆಯೋಗದ ವಿವೇಚನೆಯಂತೆ ಅನಿವಾರ್ಯ ಸಂದರ್ಭಗಳಲ್ಲಿ ರಾಜ್ಯದ ಇತರೆ ಜಿಲ್ಲಾ ಕೇಂದ್ರಗಳಲ್ಲಿಯೂ ಕನ್ನಡ ಭಾಷಾ ಮೌಖಿಕ ಪರೀಕ್ಷೆಯನ್ನು ನಡೆಸಬಹುದಾಗಿದೆ.

2) ಕನ್ನಡ ಭಾಷಾ ವಿಷಯ(ವಿಷಯ ಸಂಕೇತ:47)ದಲ್ಲಿ ಈ ಹಿಂದಿನ ಎರಡು ಅಧಿವೇಶನಗಳಲ್ಲಿ ಲಿಖಿತ ಪರೀಕ್ಷೆಯಲ್ಲಿ ವಿನಾಯಿತಿ ಪಡೆದಿದ್ದಲ್ಲಿ ವಿಷಯ ಸಂಕೇತ:47–ಕನ್ನಡ ಭಾಷಾ ವಿಷಯಕ್ಕೆ ಪುನಃ ಅರ್ಜಿ ಸಲ್ಲಿಸಿ, ವಿನಾಯಿತಿ ಪಡೆದಿರುವುದನ್ನು ಅರ್ಜಿಯಲ್ಲಿ ನಮೂದಿಸಿ ನಿಗದಿತ ಶುಲ್ಕವನ್ನು ಪಾವತಿಸತಕ್ಕದ್ದು. **ವಿಷಯ ಸಂಕೇತ:47–ಕನ್ನಡ ಭಾಷಾ ವಿಷಯದ ಎರಡು ಪತ್ರಿಕೆಗಳಿಗೆ ವಿನಾಯಿತಿ ಪಡೆದಿರುವಂತಹ ಅಭ್ಯರ್ಥಿಗಳು ಯಾವುದೇ ಕಾರಣಕ್ಕೂ ವಿಷಯ ಸಂಕೇತ:73ಅನ್ನು ಆಯ್ಕೆ ಮಾಡಿಕೊಳ್ಳಬಾರದು.** ವಿಷಯ ಸಂಕೇತ–73ಅನ್ನು ಕಂಡಿಕೆ–23(ಉ)ರಲ್ಲಿ ತಿಳಿಸಿರುವ ನೌಕರರು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರ ವಹಿಸಿ ಭರ್ತಿ ಮಾಡಬೇಕು. ಒಂದು ವೇಳೆ ತಪ್ಪಾಗಿ ಆಯ್ಕೆ ಮಾಡಿಕೊಂಡ ವಿಷಯ ಸಂಕೇತಗಳನ್ನು ಆಯೋಗವು ಯಾವುದೇ ಕಾರಣಕ್ಕೂ ಬದಲಾಯಿಸುವುದಿಲ್ಲ. ಈ ಬಗ್ಗೆ ಸ್ವೀಕರಿಸುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

3) ಕನ್ನಡ ಭಾಷಾ ವಿಷಯದ ಮೌಖಿಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಆಯೋಗದಿಂದ ಪ್ರತ್ಯೇಕವಾಗಿ ಮೌಖಿಕ ಸಂದರ್ಶನದ ಸೂಚನಾ ಪತ್ರಗಳನ್ನು ಜಾರಿ ಮಾಡಲಾಗುವುದರ ಜೊತೆಗೆ ಆಯೋಗದ ವೆಬ್‌ಸೈಟ್‌ನಲ್ಲಿಯೂ ಸಹ ಅಳವಡಿಸಲಾಗುತ್ತಿದ್ದು, ವೆಬ್‌ಸೈಟ್‌ನಿಂದಲೂ ಕೂಡ ಮೌಖಿಕ ಸಂದರ್ಶನದ ಸೂಚನಾ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡು ಮೌಖಿಕ ಪರೀಕ್ಷೆಗೆ ಹಾಜರಾಗಲು ಅವಕಾಶ ಕಲ್ಪಿಸಲಾಗಿದೆ ಹಾಗೂ ಈ ಬಗ್ಗೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಮತ್ತು ಸಂದರ್ಶನ ದಿನಾಂಕ ಮತ್ತು ಸ್ಥಳದ ಮಾಹಿತಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಹಾಗೂ ಈ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ನೀಡಲಾಗುವುದು.

4) ಕನ್ನಡ ಭಾಷಾ ವಿಷಯದ ಇಲಾಖಾ ಪರೀಕ್ಷೆ ಬರೆಯುವುದರಿಂದ ವಿನಾಯಿತಿ ಇರುವ ಬಗ್ಗೆ Karnataka Civil Services (Service and Kannada Language Examinations) Rules, 1974ರ ಉಪನಿಯಮ (5) Savings ವಿವರಗಳು ಕೆಳಕಂಡಂತಿದೆ:–

5) ಸರ್ಕಾರದ ಅಧಿಸೂಚನೆ ಸಂಖ್ಯೆ: GAD 12 SSR 72, Bangalore, dated 8th January, 1974ರ ಉಪನಿಯಮ Savings (1) A Government servent who passed-

(a) The Secondary School Leaving Certificate Examination or any examination declared as equivalent thereto by the State Government, or any examination higher than the Secondary School Leaving Certificate Examination,

i) In which the question papers on different subjects are answered in Kannada Language; or
ii) In which Kannada is the main language, Second Language or an optional subject, [but not one of the subject in a composite paper,] or

[(aa) Diploma Course / Certificate Course in Kannada conducted by a University established by Law in India, or "Kava", "Jana" or "Rathna" examinations conducted by Kannada Sahitya Parishat]

[(ab) Correspondence course in Kannada conducted by the Central Institute of Indian Language, Mysore.]

––20

Kannada Language Test conducted by the Public Service Commission or any other Selection Authority, as a part of examination for recruitment to the posts in the State Civil Services as prescribed in the Karnataka Civil Services (Direct Recruitment by Competitive Examinations and Selection) "(General) Rules, 2006" {As per Notification NO.DPAR 3 SSR 2010, Bangalore, Dated:02.02.2011.}]

(b) any examination specified in schedule III as equivalent to the Kannada Language Examination, [or who has won a prize in Kannada essay competition conducted by any University established by law,] shall on obtaining a certificate of exemption under sub-rule (5) be deemed to have passed the Kannada Language Examination under these rules]

[provided that a Government Servant who has passed on or before the eight day of July 1982, the Examination specified in clause (a) in which Kannada is one of the subjects in a composite paper shall, on obtaining a certificate of exemption under sub-rule (5) be deemed to have passed Kannada Language Examination under these rules.]

[provided further that a Government servant holding Group-"C" post for which the educational qualification prescribed is less than S.S.L.C. shall, on obtaining a certificate of exemption under sub-rule (5) be deemed to have passed the Kannada Language Examination under these rules, if such Government sevant has passed Kannada as the main Language, second language or an optional subject, but not as one of the subjects in a composite paper, in S.S.L.C. even if he has failed in other subjects.]

(2) A Government servant who has passed any examination specified as equivalent to a service examination in schedule III shall on obtaining a certificate of exemption under sub-rule (5) be deemed to have passed the said service examination under these rules.

["(2A) If in schedule III, an examination is specified as equivalent to a service examination for any Department then, the said examination shall, not withstanding that it is not specified as equivalent to a similar service examination for any other Department be deemed to be the equivalent examination to the said service examination for such other Department also, for purposes of sub-rule(2)"];

(3) A Government Servant allotted or deemed to have been allotted to serve in connection with the affairs of the State of Karnataka under Section 115 of the States Re-Organisation Act.1956 who in his parent State, was exempt from passing any examination specified as equivalent to a service examination, in schedule III on the ground that he has passed some other Examination shall on obtaining a certificate of exemption under sub-rule (5) be deemed to have passed the said service examination under these rules.

(4) A Government Servant allotted or deemed to have been allotted to serve in connection with the affairs of the State of Karnataka under Section 115 of the State Re-organisation Act, 1956 who has attained the age of forty-five years shall be exempt from passing the Kannada Language Examination under these rules.

(5) A Government servant who has passed the examinations referred to in sub-rule (1) or sub-rule(2) or sub-rule(3) may make an application in Form1 in triplicate for a certificate of exemption to the appropriate authority, and the said authority on being satisfied that the applicant has passed the said examination issue a certificate in Form II and make necessary entries of the exemption in the service records of the applicant.

**Explanation**:- For the purposes of this sub-rule “appropriate authority” means:-

i) in the case of a Government servant who is a Head of a Department, the State Government;

ii) in the case of a Government servant who is a Gazetted Officer, other than a Head of a Department, the Head of the Department, or an officer authorized by the Head of the Department;

iii) in the case of a Government servant who is non-Gazetted Officer, the Head of the Office in which such officer is working if the Head of the office is a Gazetted Officer, and if he is not a Gazetted Officer, the next official Superior who is a Gazetted Officer.

(6) Rule (6) is Ommitted.

(7) **Effect of these rules**:- These rules shall have effect notwithstanding anything contained in any rule made under the proviso to article 309 of the Constitution of India or in any order made by the Governor or the State Government in restpect of any post, but shall not effect any provision made in any law or rule specifying the qualification [other than passing of a service examination or Kannada Langurage examination] required for recruitment to any post or category of posts in respect of which no provision is made in Schedule-II to these rules.

(ಉ) **ವಿಷಯ ಸಂಕೇತ:73– ಲಿಖಿತ ಪರೀಕ್ಷೆಯಿಲ್ಲದೇ ಕನ್ನಡ ಭಾಷಾ ಮೌಖಿಕ ಪರೀಕ್ಷೆ ವಿಷಯವನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳು:–**

ಈ ಕೆಳಗೆ ವಿವರಿಸಿದ ಸಂದರ್ಭಗಳಲ್ಲಿ/ಪ್ರಕರಣಗಳಲ್ಲಿ ಮಾತ್ರ ಅನ್ವಯವಾಗುವ ಅಭ್ಯರ್ಥಿಗಳು ವಿಷಯ ಸಂಕೇತ:73–ಕನ್ನಡ ಭಾಷಾ ಮೌಖಿಕ ಪರೀಕ್ಷೆ ವಿಷಯವನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. ಇದನ್ನು ಹೊರತಾಗಿ ಇತರೆ ಅಭ್ಯರ್ಥಿಗಳು ಈ ವಿಷಯಕ್ಕೆ ಅರ್ಜಿ ಸಲ್ಲಿಸುವಂತಿಲ್ಲ. ಆದರೂ ತಪ್ಪಾಗಿ ಅರ್ಜಿ ಸಲ್ಲಿಸಿದಲ್ಲಿ ಈ ವಿಷಯದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಯಾವುದೇ ಸರ್ಕಾರಿ ನೌಕರನು/ನೌಕರಳು ಕನ್ನಡ ಭಾಷಾ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಹೊರತು ಕನ್ನಡ ಮೌಖಿಕ ಪರೀಕ್ಷೆಗೆ ಅರ್ಹರಾಗುವುದಿಲ್ಲ.

**ಆದರೆ**

**(1)** ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 08 ಎಸ್‌ಎಸ್‌ಆರ್ 81, ದಿನಾಂಕ 6ನೇ ಜೂನ್ 1981ರ ಮೇರೆಗೆ ಗೃಹರಕ್ಷಕ ಸಂಸ್ಥೆಯ ಸೈನಿಕರು ಕನ್ನಡ ಭಾಷಾ ಮೌಖಿಕ ಪರೀಕ್ಷೆಯಲ್ಲಿ ಮಾತ್ರ ತೇರ್ಗಡೆಯಾಗತಕ್ಕದ್ದು. ವೇತನ ಮುಂಬಡ್ತಿ ಪಡೆಯುವ ಮತ್ತು ಸೇವಾ ಸ್ಥಿರೀಕರಣದ ಉದ್ದೇಶಗಳಿಗೆ ಕನ್ನಡ ಭಾಷಾ ಲಿಖಿತ ಪರೀಕ್ಷೆಯ ಬದಲಾಗಿ ಗರಿಷ್ಠ 50 ಅಂಕಗಳನ್ನು ನಿಗದಿಪಡಿಸಿರುವ ಕನ್ನಡ ಮೌಖಿಕ ಪರೀಕ್ಷೆಯಲ್ಲಿ ಮಾತ್ರ ಅವರು ತೇರ್ಗಡೆ ಹೊಂದಬೇಕಾಗಿರುತ್ತದೆ.

**(2)** ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 3 ಎಸ್‌ಎಸ್‌ಆರ್ 82, ದಿನಾಂಕ 30ನೇ ಆಗಸ್ಟ್ 1982ರ ಮೇರೆಗೆ ಅಂಧರಾಗಿರುವ ಮತ್ತು ಕೆಲಸಕ್ಕೆ ಓದುವುದು ಮತ್ತು ಬರೆಯುವುದು ಅವಶ್ಯವಿಲ್ಲದ ಸರ್ಕಾರಿ ನೌಕರರಿಗೆ ಸ್ಥಿರೀಕರಣದ ಮತ್ತು ವಾರ್ಷಿಕ ವೇತನ ಮುಂಬಡ್ತಿಗಳನ್ನು ಪಡೆಯುವ ಉದ್ದೇಶಗಳಿಗಾಗಿ ಕನ್ನಡ ಭಾಷಾ ಲಿಖಿತ ಸೇವಾ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದರಿಂದ ವಿನಾಯಿತಿಸಲಾಗಿದೆ. ಆದರೆ ಅವರು ಕನ್ನಡ ಭಾಷಾ ಮೌಖಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗತಕ್ಕದ್ದು.

**(3)** ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 26 ಸೆಸೇನಿ 94, ಬೆಂಗಳೂರು, ದಿನಾಂಕ:14–07–1994ರಲ್ಲಿ ಸೂಚಿಸಿರುವ ಕಂಪೋಜಿಟರ್, ಸೀನಿಯರ್ ಕಂಪೋಜಿಟರ್, ಸೀನಿಯರ್ ಮಷಿನ್ ಮೈಂಡರ್, ಸೀನಿಯರ್ ಬೈಂಡರ್, ಸಹಾಯಕ ಪ್ರೊಸೆಸ್ ಆಪರೇಟರ್, ಆಫ್‌ಸೆಟ್ ಪ್ರಿಂಟರ್, ಆಫ್‌ಸೆಟ್ ಪ್ಲೇಟ್ ಮೇಕರ್ ಹಾಗೂ ವೈರ್‌ಮನ್ ಈ ಪದನಾಮವನ್ನು ಹೊಂದಿರುವ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ಸಿಬ್ಬಂದಿ ವರ್ಗದವರು ಮುಂಬಡ್ತಿ ಪಡೆಯಲು ಕನ್ನಡ ಭಾಷಾ ಪರೀಕ್ಷೆಯ ಲಿಖಿತ ಪರೀಕ್ಷೆ (ಪೇಪರ್ 1 ಮತ್ತು 2) ಯಿಂದ ವಿನಾಯಿತಿ ಹೊಂದಿರುತ್ತಾರೆ. ಆದರೆ ಮೌಖಿಕ ಪರೀಕ್ಷೆಯಲ್ಲಿ ಶೇಕಡ 40ರಷ್ಟು ಅಂಕಗಳನ್ನು ಪಡೆದು ತೇರ್ಗಡೆ ಹೊಂದಬೇಕಾಗಿರುತ್ತದೆ.

––22

**27. <u>ಉತ್ತೀರ್ಣತೆಗೆ ಗಳಿಸಬೇಕಾದ ಅಂಕಗಳು</u>:–**

ಅ) ಯಾವುದೇ ಸೇವಾ ಪರೀಕ್ಷೆಯಲ್ಲಿ ಉತ್ತೀರ್ಣತೆ ಹೊಂದಲು ಒಂದು ಪತ್ರಿಕೆಯನ್ನು ಒಳಗೊಂಡ ವಿಷಯವಾಗಿದ್ದಲ್ಲಿ ಸದರಿ ಪತ್ರಿಕೆಯಲ್ಲಿ ಕನಿಷ್ಠ ಶೇಕಡ 40 ಅಂಕಗಳನ್ನು ಪಡೆದಿರಬೇಕು. ಒಂದಕ್ಕಿಂತ ಹೆಚ್ಚು ಪತ್ರಿಕೆಗಳಿದ್ದಲ್ಲಿ ಪ್ರತಿ ಪತ್ರಿಕೆಯಲ್ಲಿ ಕನಿಷ್ಠ ಶೇಕಡಾ 35 ಮತ್ತು ಒಟ್ಟು ಎಲ್ಲಾ ಪತ್ರಿಕೆಗಳಿಂದ ಕನಿಷ್ಠ ಶೇಕಡಾ 40 ಅಂಕಗಳನ್ನು ಪಡೆದಿರಬೇಕು. ವಿನಾಯಿತಿ ಕೋರಿದ ಎಲ್.ಎಲ್.ಬಿ./ಬಿ.ಎಲ್., ಬಿ.ಕಾಂ./ಐ.ಕಾಂ., ಮತ್ತು ಬಿ.ಬಿ.ಎಂ. ಪದವೀಧರರು ಹಾಗೂ ಡಿಪ್ಲೊಮಾ ಇನ್ ಸೆಕ್ರೆಟರಿಯೆಟ್ ಪ್ರಾಕ್ಟೀಸ್‌ನಲ್ಲಿ ಉತ್ತೀರ್ಣರಾಗಿರುವಂತಹ ಅಭ್ಯರ್ಥಿಗಳು, ಹಾಜರಾಗುವ ವಿಷಯದ ಪ್ರತಿ ಪತ್ರಿಕೆಗಳಲ್ಲಿ ಕನಿಷ್ಠ ಶೇಕಡ 35 ಅಂಕಗಳನ್ನು ಹಾಗೂ ಪ್ರತಿ ವಿಷಯದ ಎಲ್ಲಾ ಪತ್ರಿಕೆಗಳ ಸರಾಸರಿ 40 ಅಂಕಗಳನ್ನು ಗಳಿಸಿರಬೇಕು.

ಆ) ಯಾವುದೇ ಪರೀಕ್ಷೆಯಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ಶೇಕಡ 60ಕ್ಕಿಂತ ಕಡಿಮೆ ಇರದಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾದಂತಹ ಅಭ್ಯರ್ಥಿಗಳ ಫಲಿತಾಂಶವನ್ನು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವುದಾಗಿ ಘೋಷಿಸಲಾಗುವುದು.

**28. <u>ಉತ್ತೀರ್ಣತಾ ಪ್ರಮಾಣಪತ್ರಗಳು</u>:–**

ಅ) ಆಯೋಗದಿಂದ ಅಧಿಕೃತವಾಗಿ ಫಲಿತಾಂಶವನ್ನು ಪ್ರಕಟಿಸಿದ ನಂತರ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಸಂಬಂಧಿಸಿದ ಉತ್ತೀರ್ಣತಾ ಪ್ರಮಾಣಪತ್ರಗಳನ್ನು ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿರುವ ಕಛೇರಿಯ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ರವಾನಿಸಲಾಗುವುದು.

ಆ) ಆಕಸ್ಮಿಕವಾಗಿ ಉತ್ತೀರ್ಣತಾ ಪ್ರಮಾಣಪತ್ರವು ಕಾರಣಾಂತರದಿಂದ ತಲುಪದೇ ಆಯೋಗಕ್ಕೆ ಹಿಂದಿರುಗಿ ಬರುವ ಪ್ರಮಾಣಪತ್ರಗಳ ನೋಂದಣಿ ಸಂಖ್ಯೆಗಳ ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗುವುದು. ಅಂತಹ ಹಿಂದಿರುಗಿ ಬಂದ ಪ್ರಮಾಣಪತ್ರಗಳನ್ನು ಸಂಬಂಧಿತ ಅಭ್ಯರ್ಥಿಗಳು ಪಡೆಯಬೇಕಿದ್ದಲ್ಲಿ ಪರೀಕ್ಷಾ ವಿವರಗಳನ್ನೊಳಗೊಂಡ ಮನವಿಯೊಂದಿಗೆ ₹ 40/-ಗಳ ಅಂಚೆ ಚೀಟಿಯನ್ನು ಅಂಟಿಸಿದ ಸ್ವ–ವಿಳಾಸವುಳ್ಳ ಎ–4 ಅಳತೆಯ ಲಕೋಟೆಯನ್ನು ಆಯೋಗಕ್ಕೆ ಸಲ್ಲಿಸಿದಲ್ಲಿ ಅದೇ ಲಕೋಟೆಯಲ್ಲಿ ಪ್ರಮಾಣಪತ್ರವನ್ನು ಮರು ರವಾನಿಸಲಾಗುವುದು.

ಇ) ಕಛೇರಿ ವಿಳಾಸ ಬದಲಾವಣೆ ಆಗಿದ್ದಲ್ಲಿ ಅಂತಹ ಅಭ್ಯರ್ಥಿಗಳು ಇತ್ತೀಚಿನ ಕಛೇರಿ ವಿಳಾಸವನ್ನು ನಮೂದಿಸಿ ಮನವಿಯನ್ನು ದಿನಾಂಕ:**15–02–2019**ರೊಳಗೆ ಸಲ್ಲಿಸಿದಲ್ಲಿ ಹೊಸ ವಿಳಾಸಕ್ಕೆ ಪ್ರಮಾಣಪತ್ರ ರವಾನಿಸಲಾಗುವುದು.

**29. <u>ಅಂಕಪಟ್ಟಿ ಬಗ್ಗೆ</u>:–**

ಅ) ಅಂಕಗಳ ಮಾಹಿತಿಯನ್ನು ಅಪೇಕ್ಷಿಸುವ ಅಭ್ಯರ್ಥಿಗಳು ಫಲಿತಾಂಶ ಪ್ರಕಟಗೊಂಡ ನಂತರ ಆಯೋಗದ ವೆಬ್‌ಸೈಟ್ **"http://kpsc.kar.nic.in"** ನಲ್ಲಿ ತಮ್ಮ ನೋಂದಣಿ ಸಂಖ್ಯೆ ಮತ್ತು ಜನ್ಮ ದಿನಾಂಕವನ್ನು ನಮೂದಿಸಿ ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡುವುದರ ಮೂಲಕ ಪಡೆದುಕೊಳ್ಳಬಹುದು.

ಆ) ಆಯೋಗದಿಂದ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಅಂಕಪಟ್ಟಿಗಳನ್ನು ರವಾನಿಸಲಾಗುವುದಿಲ್ಲ.

**30. <u>ಅಂಕಗಳ ಮರು ಎಣಿಕೆ</u>:–**

ಯಾವುದೇ ಪರೀಕ್ಷೆಯಲ್ಲಿ ಅನುತ್ತೀರ್ಣನಾದ ಅಭ್ಯರ್ಥಿಯು ಫಲಿತಾಂಶ ಪ್ರಕಟವಾದ ದಿನಾಂಕದಿಂದ 30 ದಿನಗಳೊಳಗಾಗಿ ಸದರಿ ಪರೀಕ್ಷೆಯ ಎಲ್ಲಾ ಪತ್ರಿಕೆಗಳ ಅಥವಾ ಯಾವುದೇ ನಿರ್ದಿಷ್ಟ ಪತ್ರಿಕೆಯ ಅಂಕಗಳ ಮರುಎಣಿಕೆಗಾಗಿ ಮಾತ್ರ ಆಯೋಗಕ್ಕೆ ಅರ್ಜಿ ಸಲ್ಲಿಸಬಹುದು. ಅಂತಹ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅಭ್ಯರ್ಥಿಯು <u>ಪ್ರತಿ ವಿಷಯಕ್ಕೆ</u> ರೂ. ₹ 100/-ಗಳ ಶುಲ್ಕವನ್ನು "ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು", ಇವರಿಗೆ ಸಂದಾಯವಾಗುವಂತೆ ಪಡೆದ ಡಿಡಿ/ಐಪಿಓ ಅನ್ನು ಸಲ್ಲಿಸಬೇಕು ಹಾಗೂ ಅಭ್ಯರ್ಥಿಯು ತನ್ನ ಹೆಸರು, ಪರೀಕ್ಷಾ ಕೇಂದ್ರ, ನೋಂದಣಿ ಸಂಖ್ಯೆ ಮತ್ತು ಮರು ಎಣಿಕೆ ಮಾಡಬೇಕಾದ ವಿಷಯ ಮತ್ತು ಪತ್ರಿಕೆಯ ವಿವರಗಳನ್ನು ನಮೂದಿಸಿದ ಅರ್ಜಿಯೊಂದಿಗೆ **<u>(ಅಂಕಗಳ ಮರುಎಣಿಕೆಗೆ ಸಲ್ಲಿಸುವ ಅರ್ಜಿಯ ಮಾದರಿಯನ್ನು ಆಯೋಗದ ಅಂತರ್ಜಾಲದ Downloads ರಡಿಯಲ್ಲಿ Formats/Formsನಲ್ಲಿ ಅಳವಡಿಸಲಾಗಿದ್ದು ಡೌನ್‌ಲೋಡ್ ಮಾಡಿಕೊಂಡು ಅಗತ್ಯ ವಿವರಗಳನ್ನು ಭರ್ತಿ ಮಾಡಿ ಸಲ್ಲಿಸತಕ್ಕದ್ದು)</u>** ಐ.ಪಿ.ಓ/ಡಿ.ಡಿ.ಯ ಶುಲ್ಕವನ್ನು ಲಗತ್ತಿಸಿ ಸಲ್ಲಿಸತಕ್ಕದ್ದು. ಅಭ್ಯರ್ಥಿಯು ಪಡೆದ ಅಂಕಗಳ ಮರು ಎಣಿಕೆಯ ಸಂಬಂಧದಲ್ಲಿ ಆಯೋಗದ ನಿರ್ಣಯವೇ ಅಂತಿಮವಾಗಿರುತ್ತದೆ. **<u>ಕನ್ನಡ ಮೌಖಿಕ ಸಂದರ್ಶನದ ಅಂಕಗಳ ಮರುಎಣಿಕೆಗೆ ಅವಕಾಶವಿರುವುದಿಲ್ಲ.</u>**

––23

**31. <u>ಉತ್ತರ ಪತ್ರಿಕೆಗಳ ಮರು–ಮೌಲ್ಯಮಾಪನದ ಬಗ್ಗೆ:–</u>**

ಉತ್ತರ ಪತ್ರಿಕೆಗಳ ಮರು–ಮೌಲ್ಯಮಾಪನಕ್ಕೆ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದರೂ ಅಭ್ಯರ್ಥಿಗಳು ಮರು–ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದಲ್ಲಿ ಅಂತಹ ಮನವಿಗಳನ್ನು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವಿಲ್ಲದೆ ತಿರಸ್ಕರಿಸಲಾಗುವುದು.

**32. <u>ಇಲಾಖಾ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಇತ್ತೀಚೆಗೆ ಜಾರಿಯಾಗಿರುವ ಸರ್ಕಾರಿ ಆದೇಶಗಳು</u>:–**

**I. Government Notification No.DPAR 2 SSR 2015, Bangalore Dated:<u>27/06/2016.</u>**

1. **<u>Title and Commencement</u>**:-

(1) These rules may be called the Karnataka Civil Services (Service and Kannada Language Examinations) (Amendment) Rules, 2016.
(2) They shall come into force from the date of their publication in the Official Gazette.

2. **<u>Amendment to Schedule-I</u>:**- In schedule –I to the Karnataka Civil Services( Service and Kannada Language Examination) Rules, 1974, under the heading ``II–SERVICE EXAMINATIONS" under "NOTE.- The syllabi for the different examinations specified above shall be as spiecified below", in Serial No.53 under the Heading "Karnataka Administrative Tribunal Examination" after item 3 and entries relating threrto the following shall inserted, namely:

4) Karnataka Administrative Tribunal (Contempt of Tribunal) Rules, 1987
5) Karnataka Administrative Tribunal (Caveat) Regulations, 1987.
6) Karnataka Administrative Tribunal (Salaries, Allowances and Conditions of Services of Chairman, Vice Chairman and Members) Rules,1986.

**II. Government Notification No.DPAR 1 SSR 2015, Bangalore Dated:<u>23/09/2016</u>**

1. **<u>Title and Commencement</u>**:-
   (1) These rules may be called the Karnataka Civil Services ( Service and Kannada Language Examinations) (Amendment) Rules, 2015.
   (2) They shall come into force from the date of their publication in the Official Gazette.
2. **<u>Amendment to Schedule</u>** – I:- In Schedule –I to the Karnataka Civil Services (Service and Kannada Language Examination) Rules,1974, under the heading ``II- SERVICE EXAMINATIONS" under "NOTE- The syllabi for the different examinations specified above shall be as specified below", in Serial No. 31 under the Heading "Forest Departmental Examination" for the entries relating thereunder the following shall be substituted, namely:-

**<u>Paper-I</u>**

Marks-100
Time- 3 Hours

a. The Karnataka Forest Act,1963
b. The Karnataka Forest Rules, 1969
c. The Wildlife Protection Act,1972
d. The Wildlife Protection Karnataka Rules, 1973
e. The Forest (Concervation) Act, 1980
f. The Forest (Concervation) Act, 1981
g. The Karnataka Preservation of Trees Act, 1976
h. The Karnataka Preservation of Trees Rules, 1977

––24

**Paper-II**

Marks-100
Time- 3 Hours

a. The Karnataka Forest Code,1976
b. The Karnataka Forest Accounts Code,1976
c. The Scheduled Tribes and other Traditional Forest Dwellers Recongnition of Forest Rights Act, 2006
d. The Scheduled Tribes and other Traditional Forest Dwellers Recongnition of Forest Rights Rules, 2007
e. The Karnataka Forest Manual, 1976

**33. ನಕಲು ಪ್ರಮಾಣ ಪತ್ರಕ್ಕಾಗಿ ಮನವಿ ಸಲ್ಲಿಸುವ ವಿಧಾನ:–**

ಅಭ್ಯರ್ಥಿಯು ವಿವಿಧ ವಿಷಯಗಳಲ್ಲಿ ಉತ್ತೀರ್ಣಗೊಂಡ ಬಗ್ಗೆ ಆಯೋಗದಿಂದ ಪಡೆಯಲಾದ ಮೂಲ ಪ್ರಮಾಣಪತ್ರವನ್ನು ಕಳೆದುಕೊಂಡಲ್ಲಿ/ಸ್ವೀಕರಿಸಿಲ್ಲದಿದ್ದಲ್ಲಿ ಅಂತಹ ಅಭ್ಯರ್ಥಿಗಳು ನಕಲು ಪ್ರಮಾಣಪತ್ರವನ್ನು ಪಡೆದುಕೊಳ್ಳಬಹುದಾಗಿದ್ದು, ಸದರಿ ಪ್ರಮಾಣಪತ್ರಕ್ಕಾಗಿ ಪರೀಕ್ಷೆ ಬರೆದ ಅಭ್ಯರ್ಥಿಗಳೇ ಮನವಿಯೊಂದಿಗೆ ಈ ಕೆಳಗೆ ಸೂಚಿಸಿರುವ ಮಾಹಿತಿ/ದಾಖಲೆಗಳನ್ನು ಆಯೋಗಕ್ಕೆ ಒದಗಿಸುವ ಅಗತ್ಯವಿರುತ್ತದೆ.

**ಟಿಪ್ಪಣಿ:–**

**ಆಯೋಗದ ಅಂತರ್ಜಾಲದಲ್ಲಿ ನಕಲು ಪ್ರಮಾಣ ಪತ್ರಕ್ಕಾಗಿ ಸಲ್ಲಿಸಬಹುದಾಗಿರುವ ನಮೂನೆ/ಮಾದರಿಯ (Format/Form)ನ್ನು ಅಳವಡಿಸಲಾಗಿದ್ದು, ಅಪೇಕ್ಷಿಸುವ ಅಭ್ಯರ್ಥಿಗಳು ಡೌನಲೋಡ್ ಮಾಡಿಕೊಂಡು ವಿವರಗಳನ್ನು ಸಂಪೂರ್ಣವಾಗಿ ಭರ್ತಿ ಮಾಡಿ ನಿಗದಿತ ಶುಲ್ಕದೊಂದಿಗೆ ಹಾಗೂ ಅವಶ್ಯಕ ದಾಖಲೆಗಳನ್ನು ಸಲ್ಲಿಸತಕ್ಕದ್ದು.**

(1) ನಕಲು ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಲು ಕಾರಣಗಳನ್ನು ತಿಳಿಸುವ ಹಾಗೂ ಪರೀಕ್ಷಾ ವಿವರಗಳನ್ನೊಳಗೊಂಡ ₹ 20/- ಮೌಲ್ಯದ ಮುದ್ರಾಂಕ ಕಾಗದದ ಮೇಲೆ ನೋಟರಿಯವರ ಮುಂದೆ ಪ್ರಮಾಣೀಕರಿಸಲಾದ ಅಫಿಡೆವಿಟ್‌ನ ಮೂಲ ಪ್ರತಿ;

(2) ಪ್ರತಿ ವಿಷಯಕ್ಕೆ ₹ 100/-ರಂತೆ ಶುಲ್ಕವನ್ನು ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು, ಇವರಿಗೆ ಸಂದಾಯವಾಗುವಂತೆ ಪಡೆದ ಬ್ಯಾಂಕ್ ಡಿ.ಡಿ/ಭಾರತೀಯ ಅಂಚೆ ಆದೇಶ (ಐ.ಪಿ.ಓ)

(3) ಪ್ರವೇಶಪತ್ರದ ನೆರಳಚ್ಚು ಪ್ರತಿ ಮತ್ತು ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ಬಗ್ಗೆ ವಿವರಗಳನ್ನು ನಮೂದಿಸಿರುವ ಸೇವಾ ಪುಸ್ತಕದ ಉದ್ಧೃತ ಭಾಗದ ನೆರಳಚ್ಚು ಪ್ರತಿ ಮತ್ತು

(4) ಪ್ರಮಾಣಪತ್ರವನ್ನು ನೋಂದಾಯಿತ ಅಂಚೆ ಮೂಲಕ ರವಾನಿಸಲು ಸ್ವ–ವಿಳಾಸವುಳ್ಳ ₹ 40/-ಗಳ ಅಂಚೆ ಚೀಟಿಯನ್ನು ಅಂಟಿಸಿದ ಎ–4 ಅಳತೆಯ ಒಂದು ಲಕೋಟೆ.

**34. ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು:–**

(1) ಸೇವಾ ಪರೀಕ್ಷೆಗಳಿಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರವನ್ನು **"ಪರೀಕ್ಷಾ ನಿಯಂತ್ರಕರು, ಇಲಾಖಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560001"** ಈ ವಿಳಾಸಕ್ಕೆ ಸಲ್ಲಿಸತಕ್ಕದ್ದು.

(2) ಪರೀಕ್ಷೆಗಳ ಸಂಬಂಧದಲ್ಲಿ ಯಾವುದೇ ಮಾಹಿತಿ ಕೋರುವ ಅಭ್ಯರ್ಥಿಗಳು ಮನವಿಯಲ್ಲಿ ಎಲ್ಲಾ ಮಾಹಿತಿ ನೀಡಿ ಅದರೊಂದಿಗೆ ರೂ.40/–ರ ಅಂಚೆ ಚೀಟಿಗಳನ್ನು ಅಂಟಿದ ಸ್ವವಿಳಾಸವುಳ್ಳ ಒಂದು ಲಕೋಟೆಯನ್ನು ಲಗತ್ತಿಸಿ ಕಳುಹಿಸಿಕೊಟ್ಟಲ್ಲಿ ಮಾತ್ರ ಆಯೋಗವು ತುರ್ತಾಗಿ ಉತ್ತರವನ್ನು ನೀಡಲು ಅನುಕೂಲವಾಗುವುದು. ಇಲ್ಲವಾದಲ್ಲಿ ಯಾವುದೇ ಪತ್ರ ವ್ಯವಹಾರವಿಲ್ಲದೇ ಮನವಿಯಲ್ಲಿನ ಕೋರಿಕೆಯನ್ನು ತಿರಸ್ಕರಿಸಲಾಗುವುದು.

(3) **ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ ತಮ್ಮ ಸರಿಯಾದ ವಿವರಗಳನ್ನು ಹಾಗೂ ಇ–ಮೇಲ್ ID ಯನ್ನು ನೀಡತಕ್ಕದ್ದು. ನಂತರ ಬದಲಾವಣೆಗೆ ಅವಕಾಶವಿರುವುದಿಲ್ಲ.**

(4) ಮಾಹಿತಿಗಾಗಿ ಅಭ್ಯರ್ಥಿಗಳು ಆಯೋಗಕ್ಕೆ ಸಲ್ಲಿಸುವ ಮನವಿಗಳಲ್ಲಿ ನೋಂದಣಿ ಸಂಖ್ಯೆ, ಅಧಿವೇಶನ, ವಿಷಯ ಮತ್ತು ಜಿಲ್ಲಾ ಪರೀಕ್ಷಾ ಉಪ ಕೇಂದ್ರ ಮುಂತಾದ ವಿವರಗಳನ್ನು ಸ್ಪಷ್ಟವಾಗಿ ಸೂಚಿಸದಿದ್ದಲ್ಲಿ ಅಂತಹ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

(5) ಅಭ್ಯರ್ಥಿಗಳು ಪೊಲೀಸ್ ಅಥವಾ ಸರ್ಕಾರ ನಿಗದಿಪಡಿಸಿದ ಇನ್ನಾವುದೇ ಸಮವಸ್ತ್ರವನ್ನು ಧರಿಸಿ ಪರೀಕ್ಷೆ ಬರೆಯುವುದನ್ನು ನಿಷೇಧಿಸಲಾಗಿದೆ.

(6) ಅಭ್ಯರ್ಥಿಗಳು ತಮ್ಮೊಂದಿಗೆ ಸಹ ನೌಕರರನ್ನು/ಇತರರನ್ನು ಪರೀಕ್ಷಾ ಕೊಠಡಿಯೊಳಗೆ ಕರೆತರುವುದನ್ನು ಮತ್ತು ಪರೀಕ್ಷೆ ನಡೆಯುತ್ತಿರುವಾಗ ಅವರನ್ನು ಭೇಟಿ ಮಾಡಲು ಅವಕಾಶ ಕೋರುವುದನ್ನು ನಿಷೇಧಿಸಲಾಗಿದೆ.

(7) ಅಭ್ಯರ್ಥಿಗಳು ಪರೀಕ್ಷಾ ಕೊಠಡಿ/ಪರೀಕ್ಷಾ ಉಪಕೇಂದ್ರದ ಆವರಣದೊಳಗೆ **ಮೊಬೈಲ್ ಫೋನ್** ಹಾಗೂ ಇತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ತರುವುದನ್ನು ಮತ್ತು ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಆಕಸ್ಮಿಕವಾಗಿ ನಿಷೇಧಿತ ಇಂತಹ ವಸ್ತುಗಳನ್ನು ಪರೀಕ್ಷಾ ಕೊಠಡಿಯಲ್ಲಿ ಹೊಂದಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವುದರೊಂದಿಗೆ ಆಯೋಗದಿಂದ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು.

––25

(8) ಅಭ್ಯರ್ಥಿಗಳು ತಮಗೆ ಹಂಚಿಕೆಯಾದ ನೋಂದಣಿ ಸಂಖ್ಯೆ ನಮೂದಿಸಿದ ಸ್ಥಳದಲ್ಲಿ ಮಾತ್ರ ಕುಳಿತು ಪರೀಕ್ಷೆ ಬರೆಯತಕ್ಕದ್ದು. ಬೇರೊಬ್ಬ ಅಭ್ಯರ್ಥಿಗೆ ಹಂಚಿಕೆಯಾದ ನೋಂದಣಿ ಸಂಖ್ಯೆ ನಮೂದಿಸಿದ ಸ್ಥಳದಲ್ಲಿ ಪರೀಕ್ಷೆ ಬರೆದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಆಯೋಗದಿಂದ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು.

(9) **ಯಾವುದೇ ಹುದ್ದೆಗೆ ಕಡ್ಡಾಯಗೊಳಿಸಿದ ವಿಷಯಗಳ ಪೈಕಿ ಈ ಅಧಿಸೂಚನೆಯೊಂದಿಗೆ ಪ್ರಕಟಿಸಿದ ವೇಳಾಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳು ಒಂದೇ ದಿನ, ಒಂದೇ ಸಮಯದಲ್ಲಿ ನಡೆಯುವಂತಿದ್ದರೆ, ಅವುಗಳಲ್ಲಿ ಒಂದಕ್ಕೆ ಮಾತ್ರ ಅರ್ಜಿ ಸಲ್ಲಿಸಿ ಪರೀಕ್ಷೆಗೆ ಹಾಜರಾಗತಕ್ಕದ್ದು.**

(10) ಆಯೋಗದ ಆದೇಶ ಸಂಖ್ಯೆ ಇ.ಪ(2)3774/94–95/ಪಿಎಸ್‌ಸಿ ದಿನಾಂಕ 18ನೇ, ಫೆಬ್ರವರಿ 1995ರ ಮೇರೆಗೆ ಬ್ಯಾಟರಿ ಚಾಲಿತ ಪ್ರೋಗ್ರಾಮ್ ಮಾಡದೆ ಇರುವಂತಹ ಕ್ಯಾಲುಕ್ಯುಲೇಟರ್‌ಗಳನ್ನು (Simple non-programmable Calculator) ಮಾತ್ರ ಎಸ್.ಎ.ಎಸ್. ಪರೀಕ್ಷೆಗಳಲ್ಲಿ ಉಪಯೋಗಿಸಲು ಅಭ್ಯರ್ಥಿಗಳಿಗೆ ಅನುಮತಿ ನೀಡಲಾಗಿದೆ .

**ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಸಂಪರ್ಕಿಸಬಹುದಾಗಿರುವ ದೂರವಾಣಿ ಸಂಖ್ಯೆಗಳು:**

| ಶಾಖೆಗಳು | ದೂರವಾಣಿ ಸಂಖ್ಯೆಗಳು |
|---|---|
| ಮಾಹಿತಿ ಕೇಂದ್ರ, ಬೆಂಗಳೂರು | 080–30574957<br>080–30574901<br>080–22343137<br>080–22343139 |
| ಇಲಾಖಾ ಪರೀಕ್ಷಾ ಶಾಖೆ–1, ಬೆಂಗಳೂರು | 080–30574944 |
| ಇಲಾಖಾ ಪರೀಕ್ಷಾ ಶಾಖೆ–2, ಬೆಂಗಳೂರು | 080–30574945 |
| ಪ್ರಾಂತೀಯ ಕಛೇರಿ, ಬೆಳಗಾವಿ | 0831–2475345 |
| ಪ್ರಾಂತೀಯ ಕಛೇರಿ, ಗುಲ್ಬರ್ಗಾ | 08472–227944 |
| ಪ್ರಾಂತೀಯ ಕಛೇರಿ, ಮೈಸೂರು | 0821–2545956 |
| ಪ್ರಾಂತೀಯ ಕಛೇರಿ, ಶಿವಮೊಗ್ಗ | 08182–228099 |
| ಸಹಾಯವಾಣಿ, (ಕ.ಲೋ.ಸೇ.ಆ) ಬೆಂಗಳೂರು | 080–30574913 |
| ಸಹಾಯವಾಣಿ, (ಅರ್ಜಿ ಸಲ್ಲಿಸುವ ಸಂಬಂಧದಲ್ಲಿ) | 8904985941<br>9986736594 |

**35. ದುರ್ವರ್ತನೆ:–**

ಒಬ್ಬ ಅಭ್ಯರ್ಥಿಯು ನಕಲು ವ್ಯಕ್ತಿಯಾಗಿರುವನೆಂದು ಅಥವಾ ಯಾವುದೇ ಒಬ್ಬ ಅಭ್ಯರ್ಥಿಯು ಸೇವಾ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಕೃತ್ರಿಮ/ಖೋಟಾ ದಸ್ತಾವೇಜನ್ನು ಅಥವಾ ಅಕ್ರಮವಾಗಿ ತಿದ್ದಿದ ದಸ್ತಾವೇಜುಗಳನ್ನು ಸಲ್ಲಿಸಿದ ಅಥವಾ ಸರಿಯಲ್ಲದ ಅಥವಾ ತಪ್ಪು ಅಥವಾ ಸುಳ್ಳು ವಿವರಣೆಯನ್ನು ನೀಡಿದ ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿದ ಅಥವಾ ಪರೀಕ್ಷೆಯಲ್ಲಿ ಅಕ್ರಮ ವಿಧಾನವನ್ನು ಅನುಸರಿಸಲು ಪ್ರಯತ್ನಿಸಿದ ಅಥವಾ ಬೇರೆ ರೀತಿಯಲ್ಲಿ ಇತರೆ ಯಾವುದೇ ಅಕ್ರಮ/ಅನುಚಿತ ಮಾರ್ಗವನ್ನು ಅನುಸರಿಸಿದ ಅಪರಾಧವನ್ನು ಮಾಡಿರುವುದಾಗಿ ಆಯೋಗಕ್ಕೆ ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಯನ್ನು ಕ್ರಿಮಿನಲ್ ವ್ಯವಹರಣೆಗೆ ಗುರಿಪಡಿಸುವುದಲ್ಲದೆ, ಆಯೋಗದ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ:ಆಡಳಿತ/398/1993–94/ಪಿಎಸ್‌ಸಿ, ದಿನಾಂಕ:14–07–1993ರ ಮೇರೆಗೆ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.

ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಮೇಲ್ವಿಚಾರಕರು/ಸಂವೀಕ್ಷಕರು ನೀಡುವ ಸೂಚನೆಗಳನ್ನು ತಪ್ಪದೇ ಪಾಲಿಸುವುದು. ತಪ್ಪಿದಲ್ಲಿ ಅದನ್ನು ದುರ್ವರ್ತನೆಯನ್ನಾಗಿ (Mal-Practice) ಪರಿಗಣಿಸಲಾಗುವುದು ಮತ್ತು ಈ ಬಗ್ಗೆ ಶಿಸ್ತಿನ ಕಾರ್ಯವಿಧಾನಗಳಿಗೆ ಒಳಪಡಿಸಲಾಗುವುದು.

ಸಹಿ/–
**(ಆರ್.ಆರ್. ಜನ್ನು)**
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ

**ಕರ್ನಾಟಕ ಲೋಕಸೇವಾ ಆಯೋಗ, " ಉದ್ಯೋಗ ಸೌಧ ", ಬೆಂಗಳೂರು-560001.**

**ಅಧಿಸೂಚನೆ ಸಂಖ್ಯೆ: ಇಪ(1)671/2018-19/ಪಿಎಸ್‌ಸಿ** **ದಿನಾಂಕ: 07/11/2018**

**ಅನುಬಂಧ " ಎ "**

**2018ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳು**

**ದಿನಾಂಕ: 19/01/2019 ರಿಂದ 21/01/2019ರವರೆಗಿನ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ನವದೆಹಲಿ ಹಾಗೂ ಮಸ್ಸೂರಿ ಕೇಂದ್ರಗಳಲ್ಲಿ**
**ಪ್ರಥಮ ಹಂತವಾಗಿ ನಡೆಯಲಿರುವ ಪರೀಕ್ಷೆಗಳ ವೇಳಾಪಟ್ಟಿ.**

| ಕ್ರ. ಸಂ. | ವಾರ | ದಿನಾಂಕ | ವೇಳೆ | ವಿಷಯ |
|---|---|---|---|---|
| 1 | 2 | 3 | 4 | 5 |
| 1 | ಶನಿವಾರ | 19-01-2019 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಅಕೌಂಟ್ಸ್ ಲೋಯರ್ |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ | ಜನರಲ್ ಲಾ ಭಾಗ- II |
| 2 | ಭಾನುವಾರ | 20-01-2019 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಅಕೌಂಟ್ಸ್ ಹೈಯರ್ ಪತ್ರಿಕೆ-1 |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ | ಅಕೌಂಟ್ಸ್ ಹೈಯರ್ ಪತ್ರಿಕೆ-2 |
| 3 | ಸೋಮವಾರ | 21-01-2019 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಜನರಲ್ ಲಾ ಭಾಗ- I ಪತ್ರಿಕೆ- 1 |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ | ಜನರಲ್ ಲಾ ಭಾಗ- I ಪತ್ರಿಕೆ- 2 |

**ಸಹಿ/-**
**(ಆರ್.ಆರ್. ಜನ್ನು)**
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ

**ಕರ್ನಾಟಕ ಲೋಕಸೇವಾ ಆಯೋಗ, "ಉದ್ಯೋಗ ಸೌಧ", ಬೆಂಗಳೂರು–560001.**

**ಅಧಿಸೂಚನೆ ಸಂಖ್ಯೆ: ಇಪ(1)671/2018–19/ಪಿಎಸ್‌ಸಿ** **ದಿನಾಂಕ: 07/11/2018**

**ಅನುಬಂಧ " ಬಿ "**

**2018ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳು**
**ದಿನಾಂಕ: 22.01.2019 ರಿಂದ 31.01.2019ರವರೆಗೆ**
**ಬೆಂಗಳೂರು, ಬೆಳಗಾವಿ, ಕಲಬುರಗಿ, ಮೈಸೂರು , ಶಿವಮೊಗ್ಗ ಹಾಗೂ ನವದೆಹಲಿ ಮತ್ತು ಮಸ್ಸೂರಿ ಕೇಂದ್ರಗಳಲ್ಲಿ ದ್ವಿತೀಯ ಹಂತವಾಗಿ ನಡೆಯಲಿರುವ ಪರೀಕ್ಷೆಗಳ ವೇಳಾ ಪಟ್ಟಿ.**

| ಕ್ರ. ಸಂ. | ವಾರ | ದಿನಾಂಕ | ವೇಳೆ | ವಿಷಯ |
|---|---|---|---|---|
| **1** | **2** | **3** | **4** | **5** |
| 1 | ಮಂಗಳವಾರ | 22–01–2019 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಕನ್ನಡ ಪತ್ರಿಕೆ–1 (ಪುಸ್ತಕಗಳಿಲ್ಲದೆ) |
| | | | ಮಧ್ಯಾಹ್ನ 2.00 ರಿಂದ ಸಂಜೆ 3.00 ಗಂಟೆ | ಕನ್ನಡ ಪತ್ರಿಕೆ–2 (ಪುಸ್ತಕಗಳಿಲ್ಲದೆ) |
| 2 | ಬುಧವಾರ | 23–01–2019 | ಬೆಳಿಗ್ಗೆ 10.00 ರಿಂದ 1.00 ಗಂಟೆ | ಇನ್ಸೂರೆನ್ಸ್ ಹೈಯರ್ ಪತ್ರಿಕೆ–2 (ಪುಸ್ತಕಗಳಿಲ್ಲದೆ) |
| | | | ಮೇಲಿನಂತೆ | ಪಿ.ಡಬ್ಲ್ಯೂ.ಡಿ ಹೈಯರ್ ಭಾಗ– I ಪತ್ರಿಕೆ–1, (ಪುಸ್ತಕಗಳಿಲ್ಲದೆ) |
| | | | ಮಧ್ಯಾಹ್ನ 2.00 ರಿಂದ ಸಂಜೆ 5.00 ಗಂಟೆ | ಇನ್ಸೂರೆನ್ಸ್ ಲೋಯರ್ ಪತ್ರಿಕೆ–2 (ಪುಸ್ತಕಗಳಿಲ್ಲದೆ) |
| | | | ಮೇಲಿನಂತೆ | ಪ್ರೆಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ–2 |
| 3 | ಗುರುವಾರ | 24–01–2019 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಲೇಬರ್ ಪತ್ರಿಕೆ–1 |
| | | | ಮೇಲಿನಂತೆ | ಪ್ರಿಸನ್ಸ್ |
| | | | ಮೇಲಿನಂತೆ | ಎಕ್ಸೈಸ್ |
| | | | ಮೇಲಿನಂತೆ | ಮೋಟಾರ್ ವೆಹಿಕಲ್ಸ್ |
| | | | ಮೇಲಿನಂತೆ | ರೆವಿನ್ಯೂ ಹೈಯರ್ ಭಾಗ– I ಪತ್ರಿಕೆ–1 |
| | | | ಮೇಲಿನಂತೆ | ಇನ್ಸೂರೆನ್ಸ್ ಅಡ್ವಾನ್ಸಡ್ ಪತ್ರಿಕೆ–1 |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ | ಲೇಬರ್ ಪತ್ರಿಕೆ–2 |
| | | | ಮೇಲಿನಂತೆ | ಇನ್ಸೂರೆನ್ಸ್ ಅಡ್ವಾನ್ಸಡ್ ಪತ್ರಿಕೆ–2 |
| | | | ಮೇಲಿನಂತೆ | ರೆವಿನ್ಯೂ ಹೈಯರ್ ಭಾಗ– I ಪತ್ರಿಕೆ–2. |
| 4 | ಶುಕ್ರವಾರ | 25–01–2019 | ಬೆಳಿಗ್ಗೆ 10.00 ರಿಂದ 12.00 ಗಂಟೆ | ರೆವಿನ್ಯೂ ಹೈಯರ್ ಭಾಗ– II ಪತ್ರಿಕೆ–1 |
| | | | ಮೇಲಿನಂತೆ | ರಿಜಿಸ್ಟ್ರೇಷನ್ ಪತ್ರಿಕೆ–1 |
| | | | ಮೇಲಿನಂತೆ | ಕಮರ್ಷಿಯಲ್‌ಟ್ಯಾಕ್ಸ್ ಭಾಗ– I ಪತ್ರಿಕೆ–1 |
| | | | ಮೇಲಿನಂತೆ | ಇನ್ಸೂರೆನ್ಸ್ ಅಡ್ವಾನ್ಸಡ್ ಪತ್ರಿಕೆ–3 |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ | ರೆವಿನ್ಯೂ ಹೈಯರ್ ಭಾಗ– II ಪತ್ರಿಕೆ–2 |
| | | | ಮೇಲಿನಂತೆ | ರಿಜಿಸ್ಟ್ರೇಷನ್ ಪತ್ರಿಕೆ–2 |
| | | | ಮೇಲಿನಂತೆ | ಕಮರ್ಷಿಯಲ್‌ಟ್ಯಾಕ್ಸ್ ಭಾಗ– I, ಪತ್ರಿಕೆ–2 |
| | | | ಮೇಲಿನಂತೆ | ಇನ್ಸೂರೆನ್ಸ್ ಹೈಯರ್ ಪತ್ರಿಕೆ–1 |

| 1 | 2 | 3 | 4 | 5 |
|---|---|---|---|---|
| 5 | ಭಾನುವಾರ | 27–01–2019 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಪೊಲೀಸ್ ಮ್ಯಾನ್ಯುಯಲ್ |
| | | | ಮೇಲಿನಂತೆ | ಕೋ–ಆಪರೇಷನ್ ಪತ್ರಿಕೆ–1 |
| | | | ಮೇಲಿನಂತೆ | ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ |
| | | | ಮೇಲಿನಂತೆ | ಮಾರ್ಕೆಟಿಂಗ್ ಪತ್ರಿಕೆ–1 |
| | | | ಮೇಲಿನಂತೆ | ಮೈನಿಂಗ್ ಭಾಗ– I |
| | | | ಮೇಲಿನಂತೆ | ರೆವಿನ್ಯೂ ಲೋಯರ್ ಪತ್ರಿಕೆ–1 |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ | ಕಮರ್ಷಿಯಲ್ ಟ್ಯಾಕ್ಸ್ ಭಾಗ– I, ಪತ್ರಿಕೆ–3 ಮತ್ತು ಕೋ–ಆಪರೇಷನ್ ಪತ್ರಿಕೆ–2 (ಎರಡಕ್ಕೂ ಒಂದೇ ಪ್ರಶ್ನೆ ಪತ್ರಿಕೆ) |
| | | | ಮೇಲಿನಂತೆ | ಇನ್ಸೂರೆನ್ಸ್ ಹೈಯರ್ ಪತ್ರಿಕೆ–3 |
| | | | ಮೇಲಿನಂತೆ | ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್ |
| | | | ಮೇಲಿನಂತೆ | ಮಾರ್ಕೆಟಿಂಗ್ ಪತ್ರಿಕೆ–2 |
| | | | ಮೇಲಿನಂತೆ | ಮೈನಿಂಗ್ ಭಾಗ– II |
| | | | ಮೇಲಿನಂತೆ | ರೆವಿನ್ಯೂ ಲೋಯರ್ ಪತ್ರಿಕೆ–2 |
| 6 | ಸೋಮವಾರ | 28–01–2019 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಸಿರಿಕಲ್ಚರ್ ಪತ್ರಿಕೆ–1 |
| | | | ಮೇಲಿನಂತೆ | ಕಮ್ಯೂನಿಟಿ ಡೆವಲಪ್‌ಮೆಂಟ್ ಭಾಗ– I |
| | | | ಮೇಲಿನಂತೆ | ರೆವಿನ್ಯೂ ಲೋಯರ್ ಪತ್ರಿಕೆ–3 |
| | | | ಮೇಲಿನಂತೆ | ಕಮರ್ಷಿಯಲ್ ಟ್ಯಾಕ್ಸ್ ಭಾಗ–II ಪತ್ರಿಕೆ–1 |
| | | | ಮೇಲಿನಂತೆ | ಪ್ರೆಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ–1 |
| | | | ಮೇಲಿನಂತೆ | ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ ಪತ್ರಿಕೆ–1 |
| | | | ಮೇಲಿನಂತೆ | ಪೋರ್ಟ್ಸ್ ಹೈಯರ್ |
| | | | ಮೇಲಿನಂತೆ | ಇನ್ಸೂರೆನ್ಸ್ ಲೋಯರ್ ಪತ್ರಿಕೆ–1 |
| | | | ಮೇಲಿನಂತೆ | ಯೂಥ್ ಸರ್ವೀಸಸ್ ಮ್ಯಾನ್ಯುಯಲ್ |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ | ಸಿರಿಕಲ್ಚರ್ ಪತ್ರಿಕೆ–2 |
| | | | ಮೇಲಿನಂತೆ | ಪಿ.ಡಬ್ಲ್ಯೂಡಿ ಹೈಯರ್ ಭಾಗ–I, ಪತ್ರಿಕೆ–2 |
| | | | ಮೇಲಿನಂತೆ | ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ ಪತ್ರಿಕೆ–2 |
| | | | ಮೇಲಿನಂತೆ | ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–II |
| | | | ಮೇಲಿನಂತೆ | ಕಮರ್ಷಿಯಲ್ ಟ್ಯಾಕ್ಸ್ ಭಾಗ–II ಪತ್ರಿಕೆ–2 |
| | | | ಮೇಲಿನಂತೆ | ಪೋರ್ಟ್ಸ್ ಲೋಯರ್ |

| 1 | 2 | 3 | 4 | 5 |
|---|---|---|---|---|
| 7 | ಮಂಗಳವಾರ | 29-01-2019 | ಬೆಳಿಗ್ಗೆ 10.00 ರಿಂದ 12.00 ಗಂಟೆ<br>ಮೇಲಿನಂತೆ<br>ಮೇಲಿನಂತೆ<br>ಮೇಲಿನಂತೆ<br>ಮೇಲಿನಂತೆ | ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್ ಪತ್ರಿಕೆ-1<br>ಇನ್ಸೂರೆನ್ಸ್ ಲೋಯರ್ ಪತ್ರಿಕೆ-**3**<br>ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-**II, ಪತ್ರಿಕೆ-1**<br>ಪ್ರೆಸ್ ಮ್ಯಾನ್ಯುಯಲ್ ಲೋಯರ್ ಪತ್ರಿಕೆ-**1**<br>ಆಕ್ಟ್ಸ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವೆಲಪ್‌ಮೆಂಟ್ |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ<br>ಮೇಲಿನಂತೆ<br>ಮೇಲಿನಂತೆ<br>ಮೇಲಿನಂತೆ | ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಲಾಸ್ ಪತ್ರಿಕೆ-2<br>ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-**II, ಪತ್ರಿಕೆ-2**<br>ಪ್ರೆಸ್ ಮ್ಯಾನ್ಯುಯಲ್ ಲೋಯರ್ ಪತ್ರಿಕೆ-**2**<br>ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ ಪತ್ರಿಕೆ-1 |
| 8 | ಬುಧವಾರ | 30-01-2019 | ಬೆಳಿಗ್ಗೆ 10.00 ರಿಂದ 12.00 ಗಂಟೆ<br>ಮೇಲಿನಂತೆ<br>ಮೇಲಿನಂತೆ<br>ಮೇಲಿನಂತೆ<br>ಮೇಲಿನಂತೆ | ಪಿ.ಡಬ್ಲ್ಯೂ.ಡಿ. ಲೋಯರ್ ಪತ್ರಿಕೆ-**1**<br>ಸೋಶಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್ ವರ್ಡ್‌ಕ್ಲಾಸಸ್ ಮ್ಯಾನ್ಯುಯಲ್ ಅಂಡ್ ಕ್ಲಾಸಿಫಿಕೇಶನ್ ರಿಜರ್‌ವೇಶನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಭಾಗ- **I**<br>ಫಾರೆಸ್ಟ್ ಪತ್ರಿಕೆ-**1**<br>ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಶನ್ ಪತ್ರಿಕೆ-**2**<br>ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪತ್ರಿಕೆ-**1** |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00ಗಂಟೆ<br>ಮೇಲಿನಂತೆ<br>ಮೇಲಿನಂತೆ<br>ಮೇಲಿನಂತೆ<br>ಮೇಲಿನಂತೆ<br>ಮೇಲಿನಂತೆ | ಹೋಂ ಗಾರ್ಡ್ಸ್ ಮ್ಯಾನ್ಯುಯಲ್<br>ಸೋಶಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್ ವರ್ಡ್‌ಕ್ಲಾಸಸ್ ಮ್ಯಾನ್ಯುಯಲ್ ಅಂಡ್ ಕ್ಲಾಸಿಫಿಕೇಶನ್ ರಿಜರ್‌ವೇಶನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಭಾಗ- **II**<br>ಪಿ.ಡಬ್ಲ್ಯೂ.ಡಿ. ಲೋಯರ್ ಪತ್ರಿಕೆ-**2**<br>ಫಾರೆಸ್ಟ್ ಪತ್ರಿಕೆ-**2**<br>ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಷನ್ ಪತ್ರಿಕೆ-**3**<br>ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪತ್ರಿಕೆ-**2** |

| 1 | 2 | 3 | 4 | 5 |
|---|---|---|---|---|
| 9 | ಗುರುವಾರ | 31–01–2019 | ಬೆಳಿಗ್ಗೆ 10.00 ರಿಂದ 12.00 ಗಂಟೆ<br><br>ಮೇಲಿನಂತೆ<br><br>ಮೇಲಿನಂತೆ | ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಪತ್ರಿಕೆ–1<br>ಕರ್ನಾಟಕ ಕನ್‌ಸ್ಯೂಮರ್ ಪ್ರೋಟಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ಟ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್, **ಪತ್ರಿಕೆ–1**<br>ವಿಕಲ ಚೇತನರು ಮತ್ತು ಹಿರಿಯ ನಾಗರೀಕರಿಗೆ ಸಂಬಂಧಿಸಿದ ಅಧಿನಿಯಮ ಮತ್ತು ನಿಯಮಗಳು |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00ಗಂಟೆ<br><br>ಮೇಲಿನಂತೆ | ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ **ಪತ್ರಿಕೆ–2**<br>ಕರ್ನಾಟಕ ಕನ್‌ಸ್ಯೂಮರ್ ಪ್ರೋಟಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ಟ್ ಫೋರಮ್ ಸರ್ವಿಸ್ ಎಕ್ಸಾಮಿನೇಷನ್, **ಪತ್ರಿಕೆ–2** |

**ಸಹಿ/–**
**(ಆರ್.ಆರ್. ಜನ್ನು)**
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ

**ಕರ್ನಾಟಕ ಲೋಕಸೇವಾ ಆಯೋಗ, "ಉದ್ಯೋಗ ಸೌಧ", ಬೆಂಗಳೂರು-560001.**

**ಅಧಿಸೂಚನೆ ಸಂಖ್ಯೆ: ಇಪ.(1)671/2018-19/ಪಿಎಸ್‌ಸಿ** **ದಿನಾಂಕ: 07/11/2018**

**ಅನುಬಂಧ- " ಸಿ"**

**2018ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳು**
**ದಿನಾಂಕ: 02.02.2019 ರಿಂದ 07.02.2019ರವರೆಗೆ**
**ತೃತೀಯ ಹಾಗೂ ಅಂತಿಮ ಹಂತವಾಗಿ ಬೆಂಗಳೂರು ಹಾಗೂ ಅರ್ಹ ಅಭ್ಯರ್ಥಿಗಳಿದ್ದಲ್ಲಿ ನವದೆಹಲಿ ಮತ್ತು ಮುಸ್ಸೂರಿ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿರುವ ಪರೀಕ್ಷೆಗಳ ವೇಳಾಪಟ್ಟಿ.**

| ಕ್ರ ಸಂ. | ವಾರ | ದಿನಾಂಕ | ವೇಳೆ | ವಿಷಯ |
|---|---|---|---|---|
| 1 | 2 | 3 | 4 | 5 |
| 1 | ಶನಿವಾರ | 02-02-2019 | ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ | ಎಸ್.ಎ.ಎಸ್.ಭಾಗ- I, ಪತ್ರಿಕೆ-1 ಮತ್ತು ಎಲೆಕ್ಟ್ರಿಸಿಟಿ ಆಡಿಟ್ ಅಂಡ್ ಅಕೌಂಟ್ಸ್ ಲಾಸ್ (ಹೈಯರ್) ಭಾಗ- II (ಎರಡಕ್ಕೂ ಒಂದೇ ಪ್ರಶ್ನೆ ಪತ್ರಿಕೆ) (ಪುಸ್ತಕಗಳಿಲ್ಲದೆ) |
| | | | ಮೇಲಿನಂತೆ | ಟ್ರೆಜರಿ ಅಕೌಂಟ್ಸ್ ಭಾಗ- I ಪತ್ರಿಕೆ-1 (ಪುಸ್ತಕಗಳಿಲ್ಲದೆ) |
| | | | ಮೇಲಿನಂತೆ | ಕನ್ನಡ ಪತ್ರಿಕೆ-1(ಐಎಎಸ್,ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಮಾತ್ರ) (ಪುಸ್ತಕಗಳಿಲ್ಲದೆ) |
| | | | ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 12.00 ಗಂಟೆ | ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್ |
| | | | ಮೇಲಿನಂತೆ | ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಎಕ್ಸಾಮಿನೇಷನ್ |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ | ಎಸ್.ಎ.ಎಸ್.ಭಾಗ- I ಪತ್ರಿಕೆ-2 (ಪುಸ್ತಕಗಳಿಲ್ಲದೆ) |
| | | | ಮೇಲಿನಂತೆ | ಟ್ರೆಜರಿ ಅಕೌಂಟ್ಸ್ ಭಾಗ- I ಪತ್ರಿಕೆ-2 (ಪುಸ್ತಕಗಳಿಲ್ಲದೆ) |
| | | | ಮಧ್ಯಾಹ್ನ 2.00 ರಿಂದ ಸಂಜೆ 5.00 ಗಂಟೆ | ಸೆಕ್ರೆಟೇರಿಯಟ್ ಮ್ಯಾನುಯಲ್ ಭಾಗ- II |
| | | | ಮೇಲಿನಂತೆ | ಟ್ರಾನ್ಸ್‌ಲೇಶನ್ ಟೆಸ್ಟ್ (ಪುಸ್ತಕಗಳಿಲ್ಲದೆ) |
| | | | ಮೇಲಿನಂತೆ | ಕನ್ನಡ ಪತ್ರಿಕೆ-2 (ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಮಾತ್ರ)(ಪುಸ್ತಕಗಳಿಲ್ಲದೆ) |
| 2 | ಭಾನುವಾರ | 03-02-2019 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಎಸ್.ಎ.ಎಸ್. ಭಾಗ- I ಪತ್ರಿಕೆ-3 |
| | | | ಮೇಲಿನಂತೆ | ಟ್ರೆಜರಿ ಅಕೌಂಟ್ಸ್ ಭಾಗ- I ಪತ್ರಿಕೆ-3 |
| | | | ಮಧ್ಯಾಹ್ನ 2.00 ರಿಂದ ಸಜೆಜೆ 4.00ಗಂಟೆ | ಎಸ್.ಎ.ಎಸ್. ಭಾಗ- II ಪತ್ರಿಕೆ-1 (ಪುಸ್ತಕಗಳಿಲ್ಲದೆ) |
| | | | ಮೇಲಿನಂತೆ | ಟ್ರೆಜರಿ ಅಕೌಂಟ್ಸ್ ಭಾಗ- II ಪತ್ರಿಕೆ-1 (ಎಲಿಮೆಂಟರಿ ಬುಕ್ ಕೀಪಿಂಗ್) |

| 1 | 2 | 3 | 4 | 5 |
|---|---|---|---|---|
| 3 | ಸೋಮವಾರ | 04–02–2019 | ಬೆಳಿಗ್ಗೆ 10.00 ರಿಂದ 12.00 ಗಂಟೆ<br>ಮೇಲಿನಂತೆ<br>ಮೇಲಿನಂತೆ | ಎಸ್.ಎ.ಎಸ್. ಭಾಗ– **II** ಪತ್ರಿಕೆ–2<br>ಎಲೆಕ್ಟ್ರಿಸಿಟಿ ಲಾಸ್ ಪರೀಕ್ಷೆ ಪತ್ರಿಕೆ–1<br>ಟ್ರೆಜರಿ ಅಕೌಂಟ್ಸ್ ಭಾಗ– **II** ಪತ್ರಿಕೆ–2<br>(ಪುಸ್ತಕಗಳಿಲ್ಲದೆ) |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00ಗಂಟೆ<br>ಮೇಲಿನಂತೆ | ಎಲೆಕ್ಟ್ರಿಸಿಟಿ ಲಾಸ್ ಪರೀಕ್ಷೆ ಪತ್ರಿಕೆ–2<br>ಟ್ರೆಜರಿ ಅಕೌಂಟ್ಸ್ ಭಾಗ– **II** ಪತ್ರಿಕೆ–3 |
| | | | ಮಧ್ಯಾಹ್ನ 2.00 ರಿಂದ ಸಂಜೆ 5.00ಗಂಟೆ | ಎಸ್.ಎ.ಎಸ್ ಭಾಗ– **II** ಪತ್ರಿಕೆ–3 |
| 4 | ಮಂಗಳವಾರ | 05–02–2019 | ಬೆಳಿಗ್ಗೆ 10.00 ರಿಂದ 1.00 ಗಂಟೆ | ಎಸ್.ಎ.ಎಸ್. ಭಾಗ– **III** ಪತ್ರಿಕೆ–1 |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00ಗಂಟೆ | ಎಸ್.ಎ.ಎಸ್. ಭಾಗ– **III** ಪತ್ರಿಕೆ–2<br>(ಪುಸ್ತಕಗಳಿಲ್ಲದೆ) |
| 5 | ಬುಧವಾರ | 06–02–2019 | ಬೆಳಿಗ್ಗೆ 10.00 ರಿಂದ 12.00 ಗಂಟೆ | ಎಸ್.ಎ.ಎಸ್. ಭಾಗ– **III** ಪತ್ರಿಕೆ–3 |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00ಗಂಟೆ<br>ಮೇಲಿನಂತೆ | ಎಸ್.ಎ.ಎಸ್. ಭಾಗ– **III** ಪತ್ರಿಕೆ–4<br>(ಪುಸ್ತಕಗಳಿಲ್ಲದೆ)<br>ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್)<br>ಲಾಸ್ ಲೋಯರ್ ಪರೀಕ್ಷೆ |
| 6 | ಗುರುವಾರ | 07–02–2019 | ಬೆಳಿಗ್ಗೆ 10.00 ರಿಂದ 12.00 ಗಂಟೆ<br>ಮೇಲಿನಂತೆ<br>ಮೇಲಿನಂತೆ<br>ಮೇಲಿನಂತೆ | ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ ಹೈಯರ್ ಪರೀಕ್ಷೆ ಭಾಗ– **I**<br>ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ– **I** ಪತ್ರಿಕೆ–1<br>ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್<br>ಕರ್ನಾಟಕ ಲೋಕಸೇವಾ ಆಯೋಗ ಮ್ಯಾನ್ಯುಯಲ್ |
| | | | ಬೆಳಿಗ್ಗೆ 10.00 ರಿಂದ 1.00 ಗಂಟೆ | ಎಸ್.ಎ.ಎಸ್ ಭಾಗ – **III** ಪತ್ರಿಕೆ–5 |
| | | | ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ<br>ಮೇಲಿನಂತೆ | ಸೆಕ್ರೆಟೇರಿಯೆಟ್ ಮ್ಯಾನ್ಯುಯಲ್ ಭಾಗ– **I** ಪತ್ರಿಕೆ–2<br>ಕರ್ನಾಟಕ ಲೋಕಸೇವಾ ಆಯೋಗ<br>ರಿಕ್ರೂಟ್‌ಮೆಂಟ್ ರೂಲ್ಸ್ |

ಸಹಿ/–
**(ಆರ್.ಆರ್. ಜನ್ನು)**
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ

**<u>ಕರ್ನಾಟಕ ಲೋಕಸೇವಾ ಆಯೋಗ</u>**

**<u>ಅನುಬಂಧ–'ಡಿ'</u>**

**<u>ಕಛೇರಿ ಮುಖ್ಯಸ್ಥರು ನೀಡಬೇಕಿರುವ ದೃಢೀಕರಣ ಪತ್ರ</u>**

**<u>ವಿಶೇಷ ಸೂಚನೆ:</u>– ಎಸ್.ಎ.ಎಸ್. ವಿಷಯಗಳಿಗೆ ಅರ್ಜಿದಾರರಾಗಿರುವ ಅಭ್ಯರ್ಥಿಗಳು ತಮ್ಮ ಕಛೇರಿ ಮುಖ್ಯಸ್ಥರಿಂದ ಅನುಬಂಧ–'ಡಿ' ಅನ್ನು ದೃಢೀಕರಿಸಿ ದಿನಾಂಕ: 20/12/2018 ರೊಳಗಾಗಿ ಆಯೋಗದ ಕಛೇರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ಈ ದಿನಾಂಕದ ನಂತರ ಸಲ್ಲಿಸುವ ಅಥವಾ ಸಲ್ಲಿಸದಿರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

| ಕ್ರ. ಸಂ. | ವಿವರಗಳು | ಷರಾ |
|---|---|---|
| **1** | **2** | **3** |
| 1. | ಅಭ್ಯರ್ಥಿಯ ಹೆಸರು | |
| 2. | ಪ್ರಸ್ತುತ ಹೊಂದಿರುವ ಪದನಾಮ ಹಾಗೂ ಸೇವೆ ಸಲ್ಲಿಸುತ್ತಿರುವ ಇಲಾಖೆಯ ಹೆಸರು | |
| 3. | ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಮಾತೃ ಇಲಾಖೆ (Parent Department)ಯ ಹೆಸರು | |
| 4. | ಸರ್ಕಾರಿ ಸೇವೆಗೆ ವರದಿ ಮಾಡಿಕೊಂಡ ದಿನಾಂಕ, ಇಲಾಖೆ ಮತ್ತು ಹುದ್ದೆಯ ಹೆಸರು | |
| 5. | ವೃಂದ ಬದಲಾವಣೆ ಮಾಡಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಅದರ ವಿವರ | |
| 6. | ಪದೋನ್ನತಿಯಾಗಿದೆಯೇ? ಯಾವ ಹುದ್ದೆಯಿಂದ ಯಾವ ಹುದ್ದೆಗಳಿಗೆ (ಹುದ್ದೆವಾರು ಸೇವಾವಧಿಯ ಸಂಪೂರ್ಣ ವಿವರಗಳನ್ನು ನಮೂದಿಸತಕ್ಕದ್ದು) | |
| 7. | ಅಕೌಂಟ್ಸ್ ಹೈಯರ್ ವಿಷಯದಲ್ಲಿ ತೇರ್ಗಡೆ ಹೊಂದಿರುವರೇ? ಹೌದು ಎಂದಾದಲ್ಲಿ ಅದರ ವಿವರ (ಪ್ರಮಾಣಪತ್ರದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿ ರವಾನಿಸತಕ್ಕದ್ದು) | (ಹೌದು / ಇಲ್ಲ)<br>ನೋಂ.ಸಂ :<br>ವರ್ಷ :<br>ಅಧಿವೇಶನ : |
| 8. | ಕರ್ನಾಟಕ ನಾಗರೀಕ ಸೇವಾ(ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರನ್ವಯ/ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಮೇರೆಗೆ ಎಸ್.ಎ.ಎಸ್. ವಿಷಯಗಳ ಪರೀಕ್ಷೆಯು ಈ ಅಭ್ಯರ್ಥಿಗೆ ಕಡ್ಡಾಯವಾಗಿರುತ್ತದೆಯೇ?<br>ನಿಯಮದಲ್ಲಿ ಕಡ್ಡಾಯವಾಗಿರದಿದ್ದರೂ ಹೌದು ಎಂದಾದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರತಿಯನ್ನು ಸಲ್ಲಿಸುವುದು. | (ಹೌದು / ಇಲ್ಲ) |
| 9. | ಎಸ್.ಎ.ಎಸ್. ವಿಷಯಗಳ ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಅರ್ಜಿ ಸಂಖ್ಯೆ(Application ID). | |

| 1 | 2 | 3 |
|---|---|---|
| 10. | ಹಿಂದಿನ ಅಧಿವೇಶನಗಳ ಪರೀಕ್ಷೆಗಳಲ್ಲಿ ಎಸ್.ಎ.ಎಸ್. ವಿಷಯಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಅದರ ವಿವರ | ವಿಷಯ/ಭಾಗ :<br>ನೋಂ.ಸಂ. :<br>ವರ್ಷ :<br>ಅಧಿವೇಶನ : |

ಮೇಲ್ಕಂಡ ಮಾಹಿತಿಯನ್ನು ಸಂಬಂಧಿತರ ಸೇವಾ ದಾಖಲೆಗಳ ಮತ್ತು ಚಾಲ್ತಿಯಲ್ಲಿರುವ ಸಂಬಂಧಿತ ನಿಯಮಗಳ ಆಧಾರದ ಮೇರೆಗೆ ನೀಡುತ್ತಾ ಹಾಗೂ ದೃಢೀಪಡಿಸಲಾಗಿದೆ.

ದಿನಾಂಕ:
ಸ್ಥಳ:

ಕಛೇರಿ ಮುಖ್ಯಸ್ಥರ ಸಹಿ, ದಿನಾಂಕ ಮತ್ತು ಮೊಹರು.

***ಸೂಚನೆ:* ಈ ಪ್ರಮಾಣಪತ್ರದೊಂದಿಗೆ ಅಭ್ಯರ್ಥಿಯ ಅಕೌಂಟ್ಸ್ ಹೈಯರ್ ಉತ್ತೀರ್ಣತಾ ಪ್ರಮಾಣಪತ್ರದ ಪ್ರತಿ ಮತ್ತು ಪ್ರಸಕ್ತ ಅಧಿವೇಶನದ ಆನ್‌ಲೈನ್ ಅರ್ಜಿಯ ಪ್ರತಿಯನ್ನು ಕಡ್ಡಾಯವಾಗಿ** **ದಿನಾಂಕ: 20/12/2018ರೊಳಗಾಗಿ ಆಯೋಗದ ಕಛೇರಿಗೆ ತಲುಪುವಂತೆ** ***ಸಲ್ಲಿಸಬೇಕು.***

**ಈ ಮೇಲೆ ನಮೂದಿಸಿರುವ ದಿನಾಂಕದೊಳಗಾಗಿ ಸದರಿ ದಾಖಲೆಗಳನ್ನು ಆಯೋಗಕ್ಕೆ ಸಲ್ಲಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರ ಮಾಡದೇ ಎಸ್.ಎ.ಎಸ್. ವಿಷಯಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುತ್ತದೆ.**

**ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ**

**ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 115, ಸೆನೆನಿ 2005,**

**ದಿನಾಂಕ: 19-11-2005**

# CERTIFICATE FOR THE PERSONS WITH DISABILITIES

This is to certify that Sri/Smt/Kum ……………………………………Son/Wife/Daughter of Shri……………………………………… Age ……… old, male/female, Registration No…………… is a case of …………………………………….

He/She is physically disabled/visual disabled/speech & hearing disabled and has ………. & ………… percent) permanent (Physical impairment visual impairment speech & hearing impairment) in relation to his/her …………………..

**Note:**

1. This condition is progressive/non progressive likely to improve/not likely to improve.
2. Re-assessment is not recommended/is recommended after a period of ………… months/years.

*Strike out which is not applicable.

| | | | |
|---|---|---|---|
| **Recent attested Photograph Showing the disability affixed here.** | **DOCTOR (Seal)** | **DOCTOR (Seal)** | **DOCTOR (Seal)** |

**Signature/Thumb impression of the disabled person.**

**Countersigned by the**
**Medical Superintendent CMO/Head of Hospital**
**(with seal)**

**Place:**
**Date:**